ಕೊರವಂಜಿ

A. ANANTHIAH.

ಸಂಪುಟ ೧೨ ಜೂನ್ ೧೯೫೩ ಸಂಚಿಕೆ ೩

ಕುಹಕಿಡಿಗಳು

ದ್ರಾವಿಡ ಕಜಗಂರವರು ವಿಗ್ರಹಗಳನ್ನು ಮಾಡಿಟ್ಟು ಒಡೆಯುವ ಚಳುವಳಿಯನ್ನು ಆರಂಭಿಸಿದಾಗ, ಗಣೇಶನ ವಿಗ್ರಹಕ್ಕೇ ಮೊದಲ ಸೇವೆ ಸಲ್ಲಿಸಿದರಂತೆ.

* * *

ಆಂಧ್ರರ ರಾಜಧಾನಿ ತಿರುಪತಿಯಾಗಬೇಕು. (ಸಲಹೆ)

—ಇಲ್ಲಿನತನಕ ಆಗಿದ್ದನ್ನು ನೋಡಿದರೆ, ಈ ಸಲಹೆ ನ್ಯಾಯವೇ!

* * *

ಜವಾಬ್ದಾರಿಯುತವಾದ ಕೆಲಸಗಳಲ್ಲಿ ನೇಮಕ ಮಾಡುವುದರ ಮೂಲಕ ಅಪರಾಧಿಗಳ ಪುರೋಭಿವೃದ್ಧಿಯನ್ನು ಸಾಧಿಸುತ್ತೇವೆ. (ಮುಖಂಡರ ಹೇಳಿಕೆ)

—ಮುಖಂಡರನ್ನು ಜವಾಬ್ದಾರಿಯುತ ಕೆಲಸಕ್ಕೇ ನೇಮಿಸಿದ್ದಾರೆ.

* * *

ವಿಮಾನು ಹಿಡಿಯುವ ಕಸುಬಿನಲ್ಲಿ ತುಂಬಾ ದುಡ್ಡಿದೆಯಂತೆ.

—ದುಡ್ಡಿರಲಿ ಇಲ್ಲದಿರಲಿ ಕಸುಬೇ ಸುಖ ಎಂದು ನಮ್ಮ ಯುವಕರಂದರಂತೆ.

* * *

'ಇಲಿ, ಸಿಂಹ, ಎಸ್ಟೇಟ್‌ಡ್ಯೂಟಿ'

ಒಂದು ಊರು ಆಚೆ ಒಂದು ಕಾಡಿತ್ತಂತೆ. ಅಗಾಧವಾದ ಕಾಡಂತೆ. ಆಯುರ್ವೇದದ ಔಷಧಿಗಳೆಲ್ಲಾ ಸಮೃದ್ಧಿಯಾಗಿ ಬೆಳೆದ ಕಾಡಂತೆ. ಸಿಂಹ ಆ ಕಾನನ ರಾಜ್ಯಕ್ಕೆ ಅನಭಿಷಿಕ್ತ ಅಧ್ಯಕ್ಷ ಅರಸಂತೆ.

ಒಂದು ದಿನ ಅರಗುಹೆಯಲ್ಲಿ ಸಿಂಹ ಒಡ್ಡೋಲಗ ಮಾಡುತ್ತಿದ್ದಾಗ ಅರಿಯದ ಇಲಿ ಅದರ ಬಾಲದ ಮಿಾಶೆ ಏರಿತಂತೆ. ಏಕೆಂದರೆ ಮೃಗರಾಜನ ಬಾಲಕ್ಕೆ ಅಧಿಕಾರಿ ಗಳ್ಯಾರೋ ಬೆಣ್ಣೆ ಹಚ್ಚಿದರಂತೆ. ಅದರ ವಾಸನೆ ಹಿಡಿದು, ಎ. ಆರ್. ಪಿ. ರಕ್ಷೆ ಣೇನೂ ಗಮನಿಸದೆ ಇಲಿ ಬಾಲದ ಮಿಾಶೆ ಹತ್ತಿತಂತೆ.

ಸಿಂಹಕ್ಕೆ ಎಲ್ಲೋ ಮುಲ ಮುಲ ಎಂದಿತಂತೆ. ಕೇಸರವನ್ನು ಕುಲುಕಿತಂತೆ. ಆ ಕಲಕಲಕ್ಕೆ ಅರಗುಹೆಯ ಮೂಲೆಯಲ್ಲಿದ್ದ ಸೇವಕ ನಿದ್ದೆ ಗಣ್ಣಿನಲ್ಲೇ "ಭೋ! ಮಹಾಪ್ರಭೋ" ಎಂದು ಮಾರ್ದನಿ ಕೊಟ್ಟನಂತೆ–ಹಿರುದನಿಯಲ್ಲಿ—

ಮೃಗರಾಜ ಪಂಜ ಎತ್ತಿತಂತೆ. ಬಾಲದ ಮೇಲಿನ ಮುಲು ಮುಲು ಕರ್ತೃ ವನ್ನು ನಾಶಿಸೋಣ ಎಂದು.

ಇಲಿ ಗದ್ಗದ ಕಂಠದಲ್ಲಿ ಹೇಳಿತಂತೆ. "ಮಹಾ ಪ್ರಭೋ! ನೀನು ಈ ಅಲ್ಪ ಪ್ರಜೆಯ ಜೀವ ಉಳಿಸು. ಎಂದಾದರೂ ವಿಧಿಯು ನಿನ್ನ ಜೀವವನ್ನು ಉಳಿಸಲು ನನಗೆ ಅವಕಾಶಕೊಟ್ಟೀತು." ಎಂದಿತಂತೆ.

"ಎಲಾ ಇಲಿಯೇ! ನೀನು ನನ್ನ ಜೀವ ಉಳಿಸಲು ವಿಧಿ ಅವಕಾಶಕೊಡಬೇಕೇ? ಅದು ಹೇಗಾದರೂ ಸಾಧ್ಯ! ನನಗೆ ಹದಿನಾರು ಗಂಡು ಮಕ್ಕಳಿವೆ. ಈ ರಾಜ್ಯದಲ್ಲಿ, ಎಲ್ಲವೂ ನನಗಾಗಿ ಜೀವವನ್ನೇ ಪಣ ಇಡಲು ಸಿದ್ಧವಿದೆ. ಮೂವತ್ತೆರಡು ಅಳಿಯಂದರು ನನ್ನ ಸುರಕ್ಷತೆಯನ್ನೇ, ನನ್ನ ಸೌಭಾಗ್ಯವನ್ನೇ ಕಾಯುತ್ತಿದ್ದಾರೆ, ಅಂದ ಮೇಲೆ ನೀನೇನು ತಾನೆ ಸಹಾಯಮಾಡಬಲ್ಲೆ" ಎಂದು ಗಹಗಹಿಸಿ ನಕ್ಕಿತಂತೆ. ಆ ನಗುವಿಗೆ ಹಿಮ್ಮೇಳವಾಗಿ ಪಂಜದ ಉಗುರುಗಳೆಲ್ಲಾ ನೆಲಕ್ಕೆ ತಾಳ ತಟ್ಟಿದುವಂತೆ.

ಇಷ್ಟು ನಗಿಸಿದ್ದೀ ನೀನು, ನಿನ್ನ ಪ್ರಾಣವನ್ನು ಉಳಿಸಿರುವೆ ಎಂದು ಹೇಳಿ ಮೃಗರಾಜ ಇಲಿಯ ಜೀವ ಉಳಿಸಿತಂತೆ.

ಯಥಾಪ್ರಕಾರ ಹಳೆಯ ಕತೆಯಲ್ಲಿದ್ದಂತೆಯೇ, ಬೇಡರವನ ಬಲೆಗೆ ಮೃಗರಾಜ ಬಲಿಯಾದನಂತೆ. ಬಾಯಿ ಬಾಯಿ ಬಡಿದುಕೊಂಡನಂತೆ—ಲಬೋಡಾ ರಾಜನ ತರಹ—

* * *

ಎಲ್ಲೋ ಇದ್ದ ಇಲಿಗೆ ಈ ಗೋಳು ಕರೆ ಕೇಳಿಸಿತಂತೆ. ಓಡಿ ಬಂತಂತೆ ಶಬ್ದ ಕೇಳಿದ ತಾಣಕ್ಕೆ ನೋಡಿತಂತೆ ಮೃಗರಾಜನ ಗೋಳನ್ನು.

"ರಾಜಾ! ಅವತ್ತು ನೀನು ನನ್ನ ಪ್ರಾಣ ಉಳಿಸಿದೆ. ಇವತ್ತು ನಾನು ನಿನ್ನ ಪ್ರಾಣ ಉಳಿಸುತ್ತೇನೆ" ಎಂದು ಹೇಳಿತಂತೆ.

ಮೃಗರಾಜ ಮೀಸೆ ತಿರುವಿದನಂತೆ. "ನನಗೆ ಹದಿನಾರು ರಾಜ ಕುಮಾರರಿರುವರು, ಮೂವತ್ತೆರಡು ಅಳಿಯಂದಿರಿರುವರು. ಅವರು ಈ ಬೊಬ್ಬೆ ಕೇಳಿ ನನ್ನ ಸಹಾಯಕ್ಕೆ ಬಂದೇ ಬರುತ್ತಾರೆ. ಅಲ್ಪ ಇಲಿಯ ಸಹಾಯ ಬೇಡ. ಹಾಗಾಗದೆ ಒಂದು ಪಕ್ಷ ನನ್ನ ಕಾಲ ಮುಗಿದಿದ್ದರೆ, ನನಗೆ ದುಃಖವೇನೂ ಇಲ್ಲ. "ಜಾತಸ್ಯ ಮರಣಂ ಧ್ರುವಂ" ಸಂತೋಷವಾಗಿ ಸಾಯುತ್ತೇನೆ. ನನ್ನ ಯುವರಾಜ, ಮೊದಲ ಮಗ, ಈ ರಾಜ್ಯ ಆಳುತ್ತಾನೆ. ಉಳಿದ ಮಕ್ಕಳಿಗೆ, ಅಳಿಯಂದರಿಗೆ ಬೊಕ್ಕಸವನ್ನು ಹಂಚುವ ಉಯಿಲನ್ನು ನಿನ್ನೆ ತಾನೇ ಮಾಡಿದ್ದೇನೆ. ಸುಖವಾಗಿ ನಿಶ್ಚಿಂತೆಯಿಂದ ಸಾಯುತ್ತೇನೆ" ಎಂದಿತಂತೆ.

ಆಗ ಇಲಿ ಹೇಳಿತಂತೆ "ಮಹಾ ಪ್ರಭೋ! ಕೇಂದ್ರ ಕಾನನದ ಕಡೆ ಹುಕುಂ ನಿಮಗೆ ತಿಳಿದಂತಿಲ್ಲ. ಮೂರು ವರ್ಷದದ್ದಿಂದೆ ಮಾಡಿದ ಉಯಿಲು, ಭಾಗ್ಯ ವಿಭಾಗವೇ, ಕಾನೂನು ಪ್ರಕಾರ. ಊರ್ಜಿತವಾಗ ತಕ್ಕದ್ದು. ಇಲ್ಲದೇ ಹೋದರೆ ನೀವು ಯೋಚಿಸಿದ ಭಾಗ್ಯ ವಿಭಾಗವು ಸುಪ್ರೀಂ ನ್ಯಾಯಾಸ್ಥಾನದಲ್ಲಿ ಊರ್ಜಿತವಾಗುವುದಿಲ್ಲ. ಅಂದ ಮೇಲೆ ಕಡೆಯ ಪಕ್ಷ ಇನ್ನು ಮೂರು ವರ್ಷಗಳಾದರೂ ನೀವು ಬದುಕಿರಲೇಬೇಕು. ಅಲ್ಲದೆ ಆ ಉಯಿಲನ್ನು "ರಿಜಿಸ್ಟ್ರಿ" ಮಾಡಿಸಬೇಕು. ಇಲ್ಲದಿದ್ದರೆ ಮುಕ್ಕಾಲು ಬೊಕ್ಕಸ ಕೇಂದ್ರಕ್ಕೆ ಹೋಗಿ ಮಿಕ್ಕ ಕಾಲು ಭಾಗವೇ ನಿಮ್ಮ ಮಕ್ಕಳು ಅಳಿಯಂದಿರಿಗೆ ಉಳಿಯುತ್ತೆ." ಎಂದು.

ಮೃಗರಾಜ "ಅಯ್ಯಯ್ಯೋ!" ಎಂದಿತಂತೆ.

ಮೃಗರಾಜ "ಇದು ದಿಟವೇ ಇಲಿರಾಯ" ಎಂದು

ಮರ್ಯಾದೆಯಿಂದ ಕೇಳಿತಂತೆ.

ಮೃಗರಾಜ "ನನ್ನ ಪ್ರಾಣ ಉಳಿಸು. ನಿನ್ನ ಮಕ್ಕಳಿಗೆ ಜಮೀನ್ದಾರಿ ಕೊಡಿಸುತ್ತೇನೆ ಛತ್ರದ ಕಣಜದಲ್ಲಿ ಎಂದೂ ಅಳುತ್ತಾ ಹೇಳಿತಂತೆ.

ಆಗ ಇಲಿ ಮೃಗರಾಜನನ್ನು ಬಂಧಿಸಿದ ಬಲೆಯನ್ನು ಚುಪ್ಪಾಚೂರಾಗಿ ಕತ್ತರಿಸಿತಂತೆ. ಅಳಿಯ ಮಕ್ಕಳನ್ನೆಲ್ಲಾ ಗರ್ಜಿಸಿ, ಘರ್ಜಿಸಿ ಕರೆದು "ಹೀಗೆ ಹೀಗೆ ಆಯಿತು ನನ್ನ ಹುಕುಂ ಹೀಗೆ ಹೀಗೆ ಕೇಂದ್ರದ ಬಲೆಗಾರರು ಬಂದರೆ ನೀವು ಹೀಗೆ ಹೀಗೆ ಮಾಡಲೇ ಬೇಕು." ಎಂದೂ ಘೋಷಿಸಿತಂತೆ.

ಬಲೆಗಾರ, ಕೇಂದ್ರದ ಬಲೆಗಾರ ಬೆಳಿಗ್ಗೆ ಬಂದಾಗ ಬಲೆಯೆಲ್ಲಾ ತೂತಾಗಿದ್ದುದು ಕಂಡಿತಂತೆ. ಯಾವುದೋ ಇಲಿ ಈ ಕೆಲಸಮಾಡಿದೆ ಎಂದು ರೇಗಿದನಂತೆ. "ಇಲಿಗಳ ನಾಶನ ಆದ ಹೊರತು ಕೇಂದ್ರಕ್ಕೆ ಉಳಿಗಾಲವಿಲ್ಲ" ಎಂದು ವರದಿ ಮಾಡಿದನಂತೆ—ಕೇಂದ್ರಕ್ಕೆ—

ಕೇಂದ್ರಕ್ಕೆ ಈ ಸುದ್ದಿ ತಿಳಿದಾಗ–ಕೇಂದ್ರ ತಲೆ ಕೆರೆದುಕೊಂಡು ಸಮಿತಿ ನಿಯಮಿಸಿತಂತೆ–ಯಥಾ ಪ್ರಕಾರ–ಬೀಸೋ ದೊಣ್ಣೆ ತಪ್ಪಿಸಿಕೊಳ್ಳಲು–

ನೀತಿ:—ಕೇಂದ್ರದ ಕಾನೂನು ಬಲೆ ಏನೇ ಇರಲಿ, ಎಷ್ಟೇ ಕಷ್ಟವಾಗಲಿ ಅದನ್ನು ತೂರುವ ಇಲಿ ಇದ್ದೇ ಇರುತ್ತೆ. ಅದನ್ನೇ ಅವಲಂಬಿಸಿ—



"ನೀನು ಪತ್ರಿಕೋದ್ಯಮಿ, ಅನ್ನೋದು ಗೊತ್ತು—ಜೀವನಕ್ಕೆ ಏನುಮಾಡ್ತಿದೀ.ಅಂತ ಕೇಳಿದೆ!"

ಕೊರವಾವಲೋಕನ

ಬಲು ಬಾಯಾರಿಕೆ ಅವತ್ತು ಸಂಜೆ. ಮೂರು ಲೋಟಾ ನೀರು ತರಿಸಿ ಕುಡಿದೆ ಅರ್ಧ ಗಂಟೆಯಲ್ಲಿ. ಕೊರವ ಇದನ್ನು ನೋಡಿ ಕೇಳಿದ 'ಯಾಕೊ ಕೋಸುಂಬರಿ ಹೆಚ್ಚಾಯ್ತೇನೋ' ಎಂದು. ಕೋಲೆ ಬಸವನ ತರಹ ತಲೆಯಾಡಿಸಿದೆ.

"ಅಂದಹಾಗೆ ರಾಮನವಮೀಗೆ ಕೋಸುಂಬರಿ ಬಾಳೆಹಣ್ಣು ಬೇಲದ ಪಾನಕ ಹೀಗೆ ಬೇಯಿಸದೆ ಇದ್ದ ತಿಂಡಿಗಳನ್ನೇ ಮಾಡುತ್ತಾರಲ್ಲಾ! ಕಾರಣ ಗೊತ್ತೇ" ಎಂದ ಕೊರವ.

ಆಗಲೇ ನಾನು ತಲೆ ತುರಿಸಿಕೊಂಡಿದ್ದು. ಹೌದೇ! ಅಯೋಧ್ಯಾ ಚಕ್ರಾಧಿ ಪತಿ ಶ್ರೀರಾಮ ಚಂದ್ರ! ಅವನ ಹಬ್ಬಕ್ಕೂ ಕೂಡ ಕಾಡಿನಲ್ಲಿರುವವರು ತಿನ್ನುವಂತಹ ಬೇಯಿಸದೇ ಇದ್ದ ತಿಂಡಿಯೇ ಗತಿಯೇ! ಅಂತಹ ಮಹಾಮಹಿಮನ ಚಕ್ರಾಧಿ ಪತ್ಯವು ಈಗಿನ ಕಾಲದ ಚಕ್ರಾಧಿಪತಿಗಳ ಹಾಗೆಯೇ ಆಯಿತೆ ಎನ್ನಿಸಿತು. ಕೂಡಲೇ ಹೇಳಿದೆ.

'ಅದೇನು ಸುಲಭ ಕೊರವಾ! ಶ್ರೀರಾಮಚಂದ್ರನ ಪ್ರಾಯವೆಲ್ಲಾ ಕಾಡಿನಲ್ಲೇ ಕಳೆದುಹೋಯಿತು. ಅಲ್ಲಿ ಇರುಕ್ಕೆ ಗುಡಿಸಲು ಹಾಕೋದೇ ಕಷ್ಟ. ಅಂದ ಮೇಲೆ ಅಡಿಗೆ ಮನೆಯಲ್ಲಿ ಕಟ್ಟಿಸಿಕೊಳ್ಳೋದು. ಮಸಲಾ ಕಷ್ಟಪಟ್ಟು ಒಂದು ಜೋಪಡಿ ಹಾಕಿ ದರೂ ಅಲ್ಲಿ ಅಡಿಗೆ ಮಾಡೋರು ಯಾರು? ರಾಜಕುಮಾರಿ! ಅವಳು ದಿನಕ್ಕೆ ಎರಡು ಸಲ ಒಲೆ ಹಚ್ಚಿ ಅಡಿಗೆ ಮಾಡಿದರೆ ಎರಡು ಸಲ ಬೇರೆ ಜೋಪಡಿ ಕಟ್ಟಲೇಬೇಕಾಗುತ್ತೆ ರಾಮು; ಅಲ್ಲದೆ ಇರೋದು ಎರಡು ನಾರು ಮಡಿ, ಹದಿನಾಲ್ಕು ವರ್ಷಕ್ಕೆ ಅದು ಸಾಗಬೇಕು. ಮಸಲಾ ಅದಕ್ಕೆ ಬೆಂಕಿ ಹೊತ್ತಿಕೊಂಡರೆ ಗತಿ ಏನು?

ಆ ಕಾರಣದಿಂದ ಶ್ರೀರಾಮಚಂದ್ರ, ಬಲು ಶಹಣೆ ಅವ-ಸಿದ್ಧಾಂತ ಮಾಡಿದ್ದಿರ ಬೇಕು. ಈ ಕಾನನವಾಸ ಮುಗಿಯೋ ತನಕ, ಬೇರೆ ಅಡಿಗೆಯವರು ಸಿಗೋತನಕ, ಹಸಿ ಆಹಾರವನ್ನೇ ತಿನ್ನುತ್ತೇನೆ ಎಂದು. ಅದರ ನೆನಪಿಗಾಗಿ ಹಸಿಕಾಳು ನೆನೆಸೀ ಹಸೀ ಮೆಣಸಿನಕಾಯಿ ಹಸಿಕೊಬ್ಬರಿ ಹಾಕಿ, ಹಸಿ ಕೋಸುಂಬರಿಮಾಡಿ, ಹಸಿ ನಿಂಬೇ ಹಣ್ಣಿನ ಪಾನಕ, ಬೇಲದ ಪಾನಕಮಾಡಿ, ಇದೇ ನನಗೆ ಪ್ರೀತಿಯ ಹಬ್ಬ ಎಂದು ಅವ ಅಂದಿದ್ದಿರಬೇಕು. ನಾವು ಅದನ್ನೇ ವರ್ಷಕ್ಕೆ ಒಂದು ಹೊತ್ತು ಕಾಡಿನ

ಜೀವನ ನೆನಪಾಗಲಿ ಅಂತ ಆ ಆಹಾರಗಳನ್ನು ಬೆಳ್ಳಿ ತಟ್ಟೆಯಲ್ಲಿಟ್ಟುಕೊಂಡು ಚಮಚ ದಲ್ಲಿ ತಿನ್ನುತ್ತೇವೆ-ಊಟಕ್ಕೆ ಮುಂಚೆ-" ಎಂದೆ.

"ಎಲಾ! ಎಲಾ! ಇಷ್ಟು ತಿಳಿಯಿತೇ ನಿನಗೆ! ಪರವಾಗಿಲ್ಲ ನನ್ನ ಸಹವಾಸ ಮಾಡಿದ್ದಕ್ಕೆ, ಒನಕೇನೂ ಚಿಗುರುತ್ತೆ ಅಂತ ಖಂಡಿತವಾಯ್ತು" ಎಂದು ಕಡೇಮಾತು ಆಡಿಯೇ ಬಿಟ್ಟ.

*   *   *

ಕೊರವ ಆವತ್ತು ಕ್ಲಬ್ಬಿಗೆ ಬಂದಾಗ, ಶಾಮು, ಸೋಮು, ಇಬ್ಬರೂ ಆಲಿಂಗನ ಮಾಡಿಕೊಳ್ಳುತ್ತಿದ್ದರು ಬಹಿರಂಗವಾಗಿ. ಸಾಮಿ, ಸೀತು ಇಬ್ಬರೂ ಅವರನ್ನೇ ರೆಪ್ಪೆಹಾರಿಸದೆ ನೋಡುತ್ತಿದ್ದರು. ಈ ನಾಲ್ಕು ಜನದ ಮಧ್ಯೆ ಇದ್ದ ಮೇಜಿನ ಮೇಲೆ ನಾಲ್ಕು ಖಾಲಿ ಗಾಜಿನ ಲೋಟಾಗಳಿದ್ದುವು.

ಕೊರವನು ಬಂದುದು ಅವನ ಗಿರ್ಕಿ ಷೂಗಳಿಂದಲೇ ಹದಿನಾಲ್ಕು ಲೋಕ ಗಳಿಗೂ ತಿಳಿಯುತ್ತಿತ್ತು. ನಾಲ್ಕು ತಲೆಗಳೂ ಗಿರ್ಕಿಷೂವಿನ ಶಬ್ದದ ಕಡೆಗೆ ತಿರುಗಿ ದುವು. ಕೊರವನನ್ನೂ ಕಂಡವು.

ಶಾಮು ಕೂಗಿದ

"ಕೊರವ! ನೀನೂ ಜಿದ್ದಾ ಜಿದ್ದಿನ ಕುಸ್ತಿಯನ್ನು ನಿನ್ನೆ ನೋಡಿದೆಯಲ್ಲಾ! ಕತ್ತರಿಪಟ್ಟು ಎಂದರೆ ಹೀಗಲ್ಲವೇ? ಎಂದು ತನ್ನ ಬಲತೊಡೆಯನ್ನು ಸೋಮನ ಸೊಂಟಕ್ಕೆ ಏರಿಸಲು ಪ್ರಯತ್ನಿಸಿದ. ಸೋಮನ ಸೊಂಟದ ಸುತ್ತಳತೆ ಆರಡಿ. ಅಂದರೆ ಎಪ್ಪತ್ತೆರಡು ಇಂಚು. ಶಾಮುವಿನ ತೊಡೆ ಕಾಲು ಎಲ್ಲಾ ಸೇರಿದರೆ ಮೂರಡಿ ಮೂವತ್ತಾರು ಇಂಚು. ಆದರೂ ಶಾಮು ಪ್ರಯತ್ನ ಪಡುತ್ತಿದ್ದ.

ಕೊರವ ಎಷ್ಟು ಗಂಭೀರವಾಗಿದ್ದ ಅಂತೀರಿ? ಸಾಮಿ, ಸೀತೂ ಇಬ್ಬರೂ ಆ ಕಂಚಿ ಕಾಲು, ಈ ಬೃಹತ್ ಸೊಂಟವನ್ನು ಅರೆವಾಶಿಕೂಡ ಆಕ್ರಮಿಸದೆ ಇದ್ದುದನ್ನು ಕಂಡು, ಇಂತಹ ಕತ್ತರಿ ಏನನ್ನು ತಾನೇ ಕತ್ತರಿಸೀತು ಎಂದು ಬಿಕ್ಕಿ ಬಿಕ್ಕಿ ನಗುತ್ತಿ ದ್ದರೂ, ಕೊರವ ಜ್ಞಾನ ಮುದ್ರೆ ಧರಿಸಿದ್ದ. ಪೋಕರ್ ಆಟಗಾರನ ಮುಖ ಭಂಗಿ. ಸುಷುಪ್ತಾವಸ್ಥೆಯ ಸುದೃಶ್ಯ ಅವನ ಮುಖ.

ಮೆಲ್ಲಗೆ ಮಂದ್ರಸ್ಥಾಯಿಯಲ್ಲಿ ನಡೆದು ಬಂದ ಕೊರವ. ಮೇಜಿಗೆ ಮೂರಡಿ ಅಂತರ ವಿದ್ದಾಗ ಹೇಳಿದ.

"ಇದು ಕತ್ತರಿ ಪಟ್ಟೇನೋ ದಿಟ. ನಿನ್ನೆ ಜಗಜಟ್ಟಿಗಳು ಮಲ್ಲಯುದ್ಧ ಮಾಡಿದಾಗ ಕತ್ತರಿಪಟ್ಟು ಹಾಕಿಯೇ ಗೆದ್ದಿದ್ದು ದಿಟ. ಆದರೆ ಅದು ಜಪಾನೀ ಕತ್ತರಿ ಪಟ್ಟು ಭಾರತದ್ದೂ ಅಲ್ಲ ರೋಮನರದ್ದೂ ಅಲ್ಲ, ಕಾಲು ಕಾಲಿಂದ ಅರ್ಧ ಟೊಂಕ ಸುತ್ತೋಪಟ್ಟಿಗೆ ಜಪಾನಿ ಕತ್ತರಿ ಪಟ್ಟು ಎನ್ನುತ್ತಾರೆ"

ಎಂದು ವಿಶದೀಕರಿಸಿದ.

ನಾಲ್ಕು ಮೊಗಗಳಿಗೂ ಆಗ ಅನುಮಾನ ಹುಟ್ಟಿತು ಈ ಪಟ್ಟು ಜಪಾನಿ ಪಟ್ಟಿರಬಹುದು ಆದರೆ ಅದರಿಂದ ಕೆಳಗೆ ಎದುರಾಳಿಯನ್ನು ಬೀಳಿಸುವುದು ಹೇಗೆ ಎಂತ. ಒಬ್ಬರ ಮುಖ ಒಬ್ಬರುನೋಡಿದೆವು. ಆಗ ಕೊರವ ಪ್ರಸನ್ನನಾಗಿ ತೋರಿಸಿ ಕೊಟ್ಟ ಈ ಜಪಾನಿ ಕತ್ತರಿ ಪಟ್ಟನಿಂದ ಹೇಗೆ ಇಳಿಸಬಹುದು ಎದುರಾಳಿಯನ್ನು ಎಂಬುವುದನ್ನು.

ಮೊದಲು ಕಾಲನ್ನು ಎದುರಾಳಿಯ ಸೊಂಟಕ್ಕೆ ಏರಿಸುವುದು ಹೀಗೆ ಎಂದು ಓಂಪುಡಿಯಲ್ಲಿ ತಟ್ಟೆಯ ಮೇಲೆ ಚಿತ್ರಿಸಿದ. ನಂತರ ಎಡಗೈಯಿಂದ ಎದುರಾಳಿಯ ಬಲ ಕಣಕಾಲನ್ನೂ ಹೀಗೆ ಹಿಡಿಯಬೇಕು ಎಂದೂ ಚಿತ್ರಿಸಿದ ಖಾರಾಶೇವೆಯಲ್ಲಿ. ನಂತರ ಹೀಗೆ ಜಗ್ಗಿದರೆ ಅಡಕಕತ್ತರೀಲಿ ಸಿಕ್ಕಿಹಾಕಿಕೊಂಡ ಹಾಗೆ ಎದುರಾಳಿ ಬೆನ್ನು ತಾಕಿಸುತ್ತಾನೆ ನೆಲಕ್ಕೆ ಎಂದು ಎಲ್ಲವನ್ನು ಒಟ್ಟುಗೂಡಿಸಿ ತಾನು ಬಾಯಿಗೆ ಹಾಕಿಕೊಂಡ.

ಎಲಾ! ಮಗನೇ! ಮಲ್ಲಯುದ್ಧದ ನೆಪದಲ್ಲಿ ಒಂದು ತಟ್ಟೆ ಚೌ ಚೌ ನೇ ನುಂಗಿದನಲ್ಲಾ ಈ ಕೊರವ ಎಂದು ಸೂಚಿಸಲು ಎಲ್ಲರೂ ಹಣೆಯಲ್ಲಿ ನೆರಿಗೆ ಕಾಣಿಸಿದೆವು.

* * *

ಮೂರು ಸಂಜೆ ತುಂತುರು ಮಳೆಹಾಕಿತ್ತು. ಬೇಸಿಗೆಯ ಧಗೆ ತಕ್ಕಮಟ್ಟಿಗೆ ಇದು ಬೆಂಗಳೂರು, ಬೆಂದಕಾಳೂರಲ್ಲ! ಎನ್ನಿಸುವಂತಾಗಿತ್ತು. ಕ್ಲಬ್ಬಿಗೆ ಬಂದಿದ್ದವರೆಲ್ಲಾ ದಪ್ಪ ವುಲನ್ ಸೂಟುಗಳನ್ನೇ ಧರಿಸಿ ಬಂದಿದ್ದರು.

ತಿಳಿರೇಷ್ಮೆ ಸೂಟ್ ಧರಿಸಿ ಬಂದಿದ್ದ ಕೊರವ. ಆ ಸಂಜೆ ಆದರೆ ಅಂಗೈಯಿಂದ ಮುಖಕ್ಕೆ ಗಾಳಿ ಬೀಸುತ್ತಿದ್ದ. ಮೈಯೆಲ್ಲಾ ಬೆವರಿ ಬಟ್ಟೆಯೆಲ್ಲಾ ಒದ್ದೆಯಾಗಿತ್ತು. ಹಣೆಮೇಲಿಂದ ಬೆವರು ಹರಿಯುತ್ತಲಿತ್ತು. ಮಿಸೆಕೂಡ ತಕ್ಕಮಟ್ಟಿಗೆ ಒದ್ದೆಯಾಗಿತ್ತು ಏನೋ ಆಗಬಾರದ ಆಕಸ್ಮಿಕ ಆಗಿದೆ. ಹೆದರಿ ನೀರಾಗಿದ್ದಾನೆ ಈ ಗಂಡುಗಲಿ ಎಂದೆನ್ನಿಸಿತು.

ನಾವೆಲ್ಲಾ ಒಮ್ಮೆಲೇ ಈ ಯೋಚನೆಯನ್ನು ನಮ್ಮ ಮುಖದ ಕಾತುರತೆಯಿಂದ ಕಾಣಿಸಿದೆವು.

ಮೂರು ನಿಮಿಷ ಒಂದು ಕುರ್ಚಿಯ ಮೇಲೆ ಕುಳಿತು, ಇನ್ನೊಂದು ಕುರ್ಚಿಯ ಮೇಲೆ ಕಾಲೆರಡನ್ನೂ ಕುಳ್ಳಿರಿಸಿ ಸುಧಾರಿಸಿಕೊಂಡ, ಕೊರವ.

ಆ ಮೇಲೆ ನಿಧಾನವಾಗಿ ಹೇಳಿದ "ಮೊನ್ನೆ ದಿನ ಸಾಹಿತಿಗಳ ಸಂಘದಲ್ಲಿ" ಸಾಹಿತ್ಯದಲ್ಲಿ ಮಾನಮರ್ಯಾದೆ ಎನ್ನುವ ವಿಷಯ ಭಾಷಣಮಾಡಿದ್ದನ್ನು ನೀವು

ಪತ್ರಿಕೆಗಳಲ್ಲಿ ಓದಿದ್ದಿರಬೇಕು. ಆ ದಿನ ಕಾರ್ಮಿಕ ಸಾಹಿತಿಗಳ ಗುಂಪಿನವರು ನನ್ನ ಭಾಷಣ ಕೇಳಿ ಮೇಲೆ ಕಲ್ಲೊಂ ದೆಸೆಯಲಿಲ್ಲ ಏಕೆಂದರೆ ಹತ್ತಿರದಲ್ಲಿ ಯಾವ ರಸ್ತೆಯೂ ಸರ್ಕಾರಿಪರ ರಿಪೇರಿಯಾಗುತ್ತಿದ್ದಿಲ್ಲ. ಹೇಗೋ ಕಾರಿನಲ್ಲಿ ಬೇಗ ಎಂಟು ಗಂಟೆ ಸಂಜೆಗೆ ಕ್ಲಬ್ಬಿಗೆ ಸುರಕ್ಷಿತವಾಗಿ ಬಂದೆ. ಆದರೆ ಈ ಸಂಜೆ ವಿಮಾನ ನಿಲ್ದಾಣಕ್ಕೆ ನನ್ನ ಅಳಿಯನ್ನ ಎದುರುಗೊಳುಕ್ಕೆ ಅಂತ ಹೋಗಿದ್ದೆ. ಮದ್ರಾಸಿನಲ್ಲಿ ಚಂಡಮಾರುತ ಅಂತ ಆ ವಿಮಾನ ಹೊರಡಲೇ ಇಲ್ಲವಂತೆ. ನಾನು ಹಿಂತಿರುಗಿ ಬರುವಾಗ ಮೈಲಿ ರಸ್ತೆ ಉದ್ದಕ್ಕೂ ಕಪ್ಪು ಬಾವುಟದ ಪ್ರದರ್ಶನ ಏರ್ಪಾಡಾಗಿತ್ತು. ಕಾರ್ಮಿಕ ಸಾಹಿತಿಗಳು ಈ ರೀತಿ ನನಗೆ ಅಪಮಾನ ಮಾಡುತ್ತಾರೆ ಎಂದು ತಿಳಿದಿರಲಿಲ್ಲ. ಇಷ್ಟರ ಮಟ್ಟಿಗೆ ಅವರ ಮನಸ್ಸುನೋಯಿಸಿದೆ ಎಂದು ತಿಳಿಯಲಿಲ್ಲ. ಎಲ್ಲಿ ನನ್ನ ದೇಹಕ್ಕೆ ತಾಪ ತಗುಲಿಸುತ್ತಾರೋ? ಎಂದೇ ಹೆದರಿ ಬಂದೆ. ದೇವರ ದಯೆ, ಸರಸ್ವತಿಯ ಕರುಣೆ, ಏನೂ ಎಲ್ಲೂ ಜಖಂ ಆಗದೆ ಬಂದೆ. ಆದರೆ ಆ ಭಯ ಇನ್ನೂ ಹೋಗಿಲ್ಲ" ಎಂದ.

"ಅಯ್ಯೋ! ಪೆಚ್ಚೆ! ಈ ದಿನ ದೆಹಲಿಯಿಂದ ಡಲ್ಸ್‌ರವರು, ಬರುತ್ತಾರೆ ವಿಮಾನದಲ್ಲಿ, ಎಂಬುವ ಸುದ್ದಿ ಕೇಳಲಿಲ್ಲವೇ ಅವರಿಗಾಗಿ ಅವರೆಲ್ಲಾ ಕಾದಿದ್ದರು, ಕಪ್ಪು ಬಾವುಟ ಹಿಡಿದು, ನೀನು ಯಾವ ದೊಡ್ಡ ಮನುಷ್ಯ ಅಂತ ನಿನಗೆ ಹೀಗೆ ಭಾರೀ ಸ್ವಾಗತ ನೀಡುತ್ತಾರೆ ಜನರು" ಎಂದ ಕುಳ್ಳಯ್ಯಂಗಾರಿ.

ಒಮ್ಮೆಲೇ ಬೆವರು ನಿಂತಿತು ಕೊರವನ ಹಣೆಯ ಮೇಲೆ ಮಿಾಸೆಯೆಲ್ಲಾ ಒಣಗೇ ಹೋಯಿತು. ಇಳಿದ ತುಟಿಯ ರೇಖೆಗಳು ಸ್ವಲ್ಪ ಮೇಲಕ್ಕೆದ್ದುವು. ಕೊರವನ ಮುಖದಲ್ಲಿ ಕೊರವನ ಕಳೆ ತೊರ ತೊಡಗಿತು.

"ಅಯ್ಯೋ! ಈ ಸುದ್ದಿ ಮೊದಲೇ ಗೊತ್ತಿದ್ದಿದ್ದರೆ, ವಿನಾಕಾರಣ, ಇಷ್ಟು ಸುಸ್ತಾಗುತ್ತಿರಲಿಲ್ಲ. "ಡಲ್ಸ್"ಗೇ ಆ ಕಪ್ಪು ಬಾವುಟದ ಮೆರವಣಿಗೆ ಅಂತ ತಿಳಿಯ ಲಿಲ್ಲ. ಅದೆಲ್ಲಾ ನನಗೇ ಅಂತ ಹೆದರಿಕೊಂಡು ಇಷ್ಟು ಸುಸ್ತಾದೆ.

ಆದರೆ ಈಗನ್ನಿಸುತ್ತೆ. 'ಡಲ್ಸ್'ರ ತರಹವೇ ನನಗೂ ಮರ್ಯಾದೆ ದೊರ ಕುತ್ತೆ ಅಂತ ನನಗೆ ತಿಳಿದಿದ್ದರೆ ನಾನೂ ಪುಕ್ಕ ಕಟ್ಟಿಕೊಂಡು ಮೆರೆಯುತ್ತಾ ಇದ್ದೆ" ಎಂದ.

ಆಗನ್ನಿಸಿತು ನಮಗೆ. ತಿಳಿದವನು ಅಂತಿದ್ದ ಕೊರವನಿಗೇ ಈ ಪಾಡಾದರೆ, ಸಾಹೇಬರ ಮನೆಗೆ ಜಟ್ಕಾ ಗೊತ್ತುಮಾಡಿ ಕೊಡುವ ನೌಕರನಪಾಡು ಅಷ್ಟೇನೂ ಕೆಟ್ಟದಲ್ಲ ಅಂತ.

—o—

ನಿಂತಿದ್ದ ಆ ಹೈದ

(ಕಹಿ ರಗಳೆ)

"The Boy Stood on the Burning deck"

'ಉರಿಯುತಿಹ ಹರಿಗೋಲಿಂದ, ಸರಿಯದಲೆ ನಿಂತಿದ್ದ ಆ ಹೈದ'— ಎಂತೆಂದು ಓದುತಲಿದ್ದ, ಉರುಹೊಡೆಯುತಿದ್ದ ಸುಬ್ಬಣ್ಣ—ಅವನೇ ನಮ್ಮ ವೆಂಕಟೇಶನ ಪುತ್ರ ಸುಬ್ಬಣ್ಣ. ಕೇಳುತಿದ್ದನು ಅದನು ವೆಂಕಟೇಶ ಎಳೆತನದ ಹಸಿರು ದಿನ ತೆರೆಯಂತೆ ತೋರಿ ಬಂತವನ ಕಣ್ಣಮುಂದೆ. ಕಟಿ ಕಟನೆ ಕಡದನವ ತನ್ನ ಹುಳಿತದಂತಾವಳಿ ಎಲ್ಲಿ ಪುಡಿ ಪುಡಿ ಯಾದೀತೋ— ಎಂಬಂತೆ. ತಲೆ ಸಿಡಿದು—-ಎದೆ ಬಿರಿದು—ಕಣ್ ಕುಕ್ಕಿ—ನಾಶಿಕವ ಚಕ್ಕುಲಿ ಒರಲೊಳಗೆ ತುರುಕಿ ಪಿಂಡಿದಂತಾಯ್ತು. ಹುಂ—ಇದುವೆ ಪದ್ಯ ಅವರು ಎಳೆತನದಿ ಮಾಡಿದ ಕಹಿ ಕೃತಿಯು ನೆನಪೊಂದು ಮರುಕಳಿಸಿ ಅಂತಃ ಕುಕ್ಷುವಿನಲಿ ಬಿಟ್ಟು ಬಿಡದಲೆ ಕಾಡಿ ಕಸಪಿಸಿಗೆ ಕಾರಣವಾಯ್ತು—ಅಹುದು ಅಂದು ಆದಿತ್ಯವಾರ—ಅರಣ್ಯರೋಧನದೊಡನೆ ಇಸಿಯಸ್ ಹಿಡಿದು ನಿಂತಿದ್ದ ವೆಂಕಟೇಶ. 'ಎಲೆ ಮಗನೆ ನಾ ಬರುವವರೆಗೆ ನೀನಿಲ್ಲಿ ನಿಂತಿರು' ಎಂದು ಶಾಲೆ ಬಾಗಿಲಲಿ ನಿಲ್ಲಿಸಿದ್ದರು ಇವನ. ಅಂದಲ್ಲಿ ನಿಂತವನು ಇಂದಿಗೂ ನಿಂತಿಹನು ಒಂಟಿಕಾಲಲಿ ನಮ್ಮ ವೆಂಕಟೇಶ. ಅವ ನಿಂತ ಎಡೆ ಉರಿವ ಹರಿಗೋಲಾಯ್ತು—ಅದುವೆ ಹರಿಗೋಲು ಇಂದಿಗೂ ಉರಿಯುತಿದೆ. ಮೈಗೆ ಧಗೆ ಹೊಡೆಯುತಿದೆ—ಕೈಗೆ ಉರಿ ತಗುಲುತಿದೆ—ಅಗ್ನಿದೇವನ ಜಿಹ್ವೆ ಚಾಚುತಿದೆ ವೆಂಕಟೇಶನನು ಬಾಚಿ ಬಾಯಿಗಿಕ್ಕಲು ಹೀಚುತಿದೆ ಕೊರಳತನಕ. ಸುಬ್ಬಣ್ಣ ಓದಿದ ಮತ್ತೆ "ಬಾಲ ಆ ಕ್ಯಾಸಬ್ಲಾಂಕ ನಿಂತಿದ್ದ ಬೆದರದಲೆ 'ತಂದೆಯೆ!!'—ಎಂತೆಂದು ಕೂಗುತಲಿ ನಿಂತಿದ್ದ ಉರಿವಹರಿಗೋಲ ಮೇಲೆ" ಕೂಗಿದರು ಕೆಂಗಣ್ಣಬೀರಿ—"ನಿಲ್ಲಿಸೋ ಸುಬ್ಬಣ್ಣ—ಕೇಳಲಾರೆನು—" ಚೀರಿದರು ಒಮ್ಮೆಲೆ.

"ಸಾಕುಮಾಡಯ್ಯ ನಾ ಕೇಳಲಾರೆ" ಎಂದೆನುತ ಎಡಗೈಯ್ಯ ಮೇಲೆತ್ತಿ ಹಿಡಿದರು ಸಿಡಿವ ತಲೆಯನ್ನು. ಜನಕ ನಾಣತಿಯಂತೆ ನಿಂತಿದ್ದ. ಅವರ ಕಳ ಶಾಲೆಮಾಸ್ತರಗಿರಿಯೇ ಆಗಿತ್ತು. ಮಾಸ್ತರಾ ಕಸುಬು ತಾ ಉರಿವ ಹರಿಗೋಲಲ್ಲದೆ ಮತ್ತೇನು?—ಕಾಡುವಾ ಮಡದಿ—ಕಿತ್ತುತಿನ್ನುವ ಕಂದಮ್ಮಗಳು—ಕುಕ್ಕಿಕಾಡುವ ಬಾಸು—ಸಾಲದಂಗಡಿ ಸೆಟ್ಟಿ—ಒಬ್ಬೊಬ್ಬರೂ ಚಾಚುವರು ತಮ್ಮ ಉರಿನಾಲಿಗೆಯ ಮಾಸ್ತರ ಸುತ್ತ-ಬೆವತು ಕುಳಿತರು ಉರಿಮಾಡುತಲಿ ನೀರೊಲೆಯು—ಆದರೂ ತೂರಿ ಬರುತಿತ್ತು ಸುಬ್ಬಣ್ಣನ ವಾಣಿ—"ಉರಿಯುತಿಹ ಹರಿಗೋಲಿಂದ ಸರಿಯದಲೆ ನಿಂತಿದ್ದ—ಆ ಹೈದ"

—ಯಜ್ಞ ಪಶು.

—o—

ದಫೇದಾರ್ ದೇಣ್ಣೋರು

" ಕಳ್ಳರು ಬಂದರು "

ಭಯಂಕರ ಆಳು, ಕ್ರೂರದೃಷ್ಟಿ—ಹುರಿಮೀಸೆ ಕೋರೆದಾಡೆ, ಚೂಪುದಾಡಿ ಥಾಂಥಿಗ ಆಸಾಮಿ ಕೈಯಲ್ಲಿ ಕನ್ನಗತ್ತರಿ—ಕೊರಳಲ್ಲಿ ಹೊಸೆದ ಕರೀ ಕಂಬಳಿ ಥಾರದ ಹಗ್ಗ—ನಾನು ನೋಡುತ್ತಿದ್ದಂತೆಯೇ ಹೆಂಚು ತೆಗೆದು ಅಡ್ಡ ತೊಲೆಗೆ ಕರೀ ಹಗ್ಗ ಬಿಗಿದು ಬಾಯಲ್ಲಿ ಚೂರಿ ಕಚ್ಚಿಕೊಂಡು ನೇರವಾಗಿ ಇಳಿಯತೊಡಗಿದ ನಾನು ಮಲ ಗಿದ್ದ ವರಾಂಡಕ್ಕೆ ಬಾಗಿಲಿರಲಿಲ್ಲ—ಹೊರಗಡೆಯ ಅಡ್ಡ ಗಿಡ್ಡ ಗೋಡೆಯೇ ಸಾಕು ಯಾರಾದರೂ ಹಾರಿಬರಬಹುದಿತ್ತು. ಈ ಕಳ್ಳ ಆಸಾಮಿ ಸೂರಿನಿಂದ ಇಳಿದು ಬಂದುದರ ಐತಿಹ್ಯ ಅರ್ಥವಾಗಲಿಲ್ಲ. ಹಗುರಾದ ಕೆಲಸವನ್ನೂ ಬಹಳ ಕಷ್ಟಪಟ್ಟು ಮಾಡುವ ಸ್ವಭಾವದವ ಇರಬೇಕು ಈ ಕಳ್ಳ ಅಂತೆಯೇ ಈ ಸಾಹಸದ ಚೋರತನಕ್ಕೆ ಕೈಹಾಕಿರಬೇಕು. "ಎಲಾ ಇಲ್ಲಿಗೆ ಹಗ್ಗಮುಖೇನ ಇಳಿಯುವ ಬದಲು ಪಕ್ಕದ ಉಗ್ರಾಣಕ್ಕೆ ಇಳಿಯಬಾರದೆ—ಗ್ರಾಸವಾದರೂ ಸಿಕ್ಕೀತು—ಎಂದು ಸೂಚಿಸಲು ತೆರೆದ ನನ್ನ ಬಾಯಿಗೆ ಚೂರಿ ಹಿಡಿದು ಕಚಕ್ ಎಂದು ಚುಚ್ಚಿಬಿಟ್ಟ ಸರಾಗವಾಗಿ ಆ ಚೂರಿ ಬಾಯಲ್ಲಿ ಹಾದು ಅಂಗಳು ದಾಟಿ ಕತ್ತಿನಲ್ಲಿ ಹೊರಕ್ಕೆ ಚಾಚಿ ನಿಂತಿತು. ನಾನು ಸರಕ್ಕನೆ ಅದನ್ನು ಹೊರಕ್ಕೆ ಎಳೆದಾಗ ಇನ್ನೊಂದು ಚೂರಿ ನನ್ನ ಎದೆಯಲ್ಲಿ ನಾಟಿಕೊಂಡಿತ್ತು-ಆಶ್ಚರ್ಯ ಪರಮಾಶ್ಚರ್ಯ ತೊಟ್ಟು ರಕ್ತವೂ ಹೊರಕ್ಕೆ ಬರಲಿಲ್ಲ—ಆ ಚೋರ ಇದನ್ನು ಕಂಡು ರೇಗಿ ಕರಿಯ ಕಂಬಳಿ ಹಗ್ಗದಿಂದ ನನ್ನ ಕತ್ತನ್ನು ಸುತ್ತಿ ಎರಡು ಮಂಡಿಯನ್ನೂ ಎದೆ ತಲೆ ಮೇಲೆ ಊರಿ ಎರಡು ಕೈಯ್ಯಲ್ಲೂ ಹಗ್ಗವನ್ನು ಎಳೆಯತೊಡಗಿದ—ಈಗಮಾತ್ರ ನನಗೆ ಗಂಟಲು ಬಿಗಿಯಿತು—ಕೂಗಲು ಬಾಯೇ ಬಾರದು. ಕಷ್ಟಪಟ್ಟು ಹೊರ ಹೊಮ್ಮಿಸಿದ ಕೂಗೂ ಕಟುಕನ ಕತ್ತಿಗೆ ಸಿಕ್ಕಿ ಕುರಿಯ ಕೂಗಿನಂತೆ ಕೊನೆಗೊಂಡಿತು. ನಡುಗುವ ಕೀಚುವಾಣಿಯಲ್ಲಿ "ಕಳ್ರೊ-ಬಂದ ರೂಊರೂ....ಊ ಊ" ಎಂದು ರಾಗ ಎಳೆದದ್ದು ಮಾತ್ರ ನೆನಪು. ಠ್ಪ್ ಠ್ಪ್ ಎಂದು ಭಾರಿ ಬೂಡ್ಸಿನ ಶಬ್ದ ಮನೆಯ ಕಲ್ಲು ಮೆಟ್ಟಿಲನ್ನು ತುಳಿದವು "ಎಲ್ಲ್ರೀ- ಕಳ್ರು-ಯಾರ್ರೀ ಕೂಗಿದ್ದು....ಎಳ್ರೀ-" ಎಂಬ ಕೂಗು-ತಟ್ಟಿ ಎಬ್ಬಿಸಿದಾಗ ಕಣ್ಣುಜ್ಜಿ ಎದ್ದಾಗ ಎದುರಿಗಿದ್ದವರು ದಫೇದಾರ್ ದೇರಣ್ಣೋರು-ನಾನು ಕಳ್ಳನ್ನ ಕಂಡದ್ದು ಕನಸಿನಲ್ಲಿ-ಎಂಬುದು ಅರ್ಥವಾಯಿತು.

"ಎಲ್ಲಿ ಕಳ್ಳರು?"

ಕನಸಿನ ಲೋಕದಿಂದ ಇನ್ನೂ ಪೂರ್ಣ ಹೊರಬರದ ನಾನು "ಅಲ್ಲೇ" ಎಂದು ಸೂರು ತೋರಿಸಿದಾಗ ಹೌ ಹಾರಿ ದೂರ ಸರಿದು ಬೆದರಿ ಬೆವತು ತಬ್ಬಿಬ್ಬಾದರು.... ಅವರ ಗಾಬರಿಯ ಮುಖ ನೋಡಿ ನನಗೆ ನಗು ಬಂತು. ನಕ್ಕೆ.

"ಎಲ್ಲ್ರೀ ಕಳ್ರ್ರು-ನಗ್ತೀರಿ! ಯಾಕೆ ಕೂಗಿದ್ದು" ಎಂದು ಜಬರದಸ್ತಿ ಮಾಡಿದರು ಖಾಕಿ ಆಸಾಮಿ, ಮೇಲೆ ದಫೆದಾರ್ರು ನಾನೂ ನಿಜ ಹೇಳಲೇ ಬೇಕಾಯಿತು.

"ಕ್ಷ ಕ್ಷಮಿಸಿ ದೇರಣ್ಣೋರೆ—ಕಳ್ಳ ಬಂದದ್ದು ಕನಸಿನಲ್ಲಿ -" ಎಂದು ಎದ್ದು ಕುಳಿತು ಹೊದ್ದಿಕೆ ಸರಿಸಿದೆ ಕನಸಿನ ಕಳ್ಳ ಎಂಬುದು ತಿಳಿದೊಡನೇ ದೇರಣ್ಣೋರ ಗಂಟಲು ಗುಟುರು ಹಾಕಿತು "ಫಕೀರಾ—ಬ್ಯಾಟರಿ ಕೊಡಿಲ್ಲಿ—" ಎಂದಾಗ ನಮ್ರತೆಯಿಂದ ಫಕೀರ ಬಂದು ಬ್ಯಾಟರಿಕೊಟ್ಟ. ಸೂರಿಗೆ ಬೆಳಕು ಚೆಲ್ಲಿ ಮತ್ತೆ ನನ್ನ ವ ೂತಿಗೆ ಬಿಟ್ಟರು. "ನೀವೇ ೯ ೯....ಏನು ರಾಯರೆ ಒಳ್ಳೆ ಕೇಸು ದಕ್ಕಿ ತೂಂತ ಓಡಿ ಬಂದರೆ ಕನಸಿನ ಕಳ್ಳರನ್ನೇ ನೀವು ಹಿಡಿದು ಕೊಡೋದು—" ಎಂದು ಓವರ್ ಕೋಟು ಬಿಚ್ಚಿ ಎದುರುಗಿನ ಗಿಡ್ಡ ಗೋಡೆ ಮೇಲೆ ಚಕ್ಕಳ ಮಕ್ಕಳ ಹಾಕಿ ಕುಳಿತರು. ಫಕೀರಪ್ಪನಿಗೆ ಮತ್ತೆ ಬೀಟಿಗೆ ಹೋಗುವಂತೆ ಹೇಳಿದರು. ರಾತ್ರಿ ಎರಡು ಘಂಟೆ ಇರಬಹುದು ಆಗ ನನಗೂ ಆ ಕೆಟ್ಟ ಕನಸಿನಿಂದಾಗಿ ಮತ್ತೆ ಮಲಗಲು ಭಯ. ದಫೆದಾರರು ಓವರ್‌ಕೋಟಿನಿಂದ ಒಂದು ಪೊಟ್ಟಣ ಹೊರತೆಗೆದು ಒಂದೇ ಒಂದು ಪಕೋಡ ಬಾಯಿಗೆಸೆದು ಕರುಂ ಕುರಂ ಎಂದು ಅಗಿದರು...." ಅಲ್ಲ್ರೀ ೯ ಕನಸಿನ ಕಳ್ಳನಿಗೆ ಹೆದರಿ ನೀವು ಕೂಗಿದರೆ—ನಮಗೆ ಹೇಗೆ ಗೊತ್ತಾಗಬೇಕು ?— ಅಂ—ಇಡೀ ನನ್ನ ಸರ್ವೀಸಿನಲ್ಲಿ ಕನಸಿನಲ್ಲಿ ಕೂಗಿದವರನ್ನ ಇದೇ ಮೊದಲು ನಾನು ಕಂಡದ್ದು...." ಎಂದು ನನ್ನ ಮೇಲೊಂದು ಪಕೋಡ ಎಸೆದರು. ನಿದ್ದೆಗಣ್ಣಿನ ಹೊಲಸು ಬಾಯಲ್ಲಿ ತಿನ್ನಲಾರದೆ ಬದಿಗಿಟ್ಟೆ.

"ನೇಟಿವ್ ಅಂದ್ರೆ—ಪಕ್ಕ ಕಂತ್ರಿ ಕಣ್ರಿ ನೀವು. ಬೆಡ್ ಕಾಫಿ ಕುಡಿಯೋ ಕಾಲದಲ್ಲಿ ಅರ್ಧ ನಿದ್ರೆಯಲ್ಲಿ ಪಕೋಡ ತಿನ್ನಲಾರಿರಾ!...." ಎಂದರು. ನಾನು ಕಣ್ಣು ಮುಚ್ಚಿ ತಿಂದೇ ಬಿಟ್ಟೆ. ಮೈಯ್ಯಲ್ಲಿ ವಿದ್ಯುತ್ ಸಂಚಾರವಾಯಿತು—ತಲೆ ಗಿವ್ ಎಂದಿತು. ಮೂತಿ ಇಂಗು ತಿಂದ ಮಂಗನಂತಾಯಿತು. ನಿಜಕ್ಕೂ ಆ ಪಕೋಡದಲ್ಲಿ ನನ್ನ ಗ್ರಹಚಾರಕ್ಕೆ ಇಡೀ ಇಂಗಿನ ಉಂಡೆ ಸೇರಿಕೊಂಡಿತ್ತು. ಆಗ ನನ್ನ ವಾಕ್‌ಝುರಿವಾಹಿನಿಯಾಗಿ ಹರಿಯಿತು. "ನಂದೇನ್ರೀ ೯ ನಮ್ಮಪ್ಪ ಕನಸಿನಲ್ಲಿ ಎದ್ದು ಶತೃಗಳನ್ನು ಸೆಣೆಯುತ್ತಿದ್ದರು—ನಮ್ಮಜ್ಜ ಕನಸಿನಲ್ಲಿ ಎದ್ದು ಬಟ್ಟೆಗಂಟು ಕಟ್ಟಿ ನದಿಗೆ ಹೋಗಿ ಒಗೆದು ಮನೆಗೆ ಬಂದು ಒಣಹಾಕಿ ಮಲಗಿದ್ದುಂಟು. ಅಂದ ಮೇಲೆ ಅವರ ವಂಶಜನಾದ ನಾನು ಕನಸಿನಲ್ಲಿ ಕೇವಲ ಕೇಕೆ ಹಾಕಬಾರದೆ?"

"....ಪಾಪ ಪಾಪ ಅಷ್ಟೊ ಬೇಡವೇ...." ಎಂದೆನ್ನುವಾಗ ನಾನು ನವಿರಾಗಿ ನಶ್ಯ ಮೂಗಿಗೇರಿಸಿದೆ. ಒಂದು ಚುಟಿಗೆಗೆ ಅವರೂ ಕೈ ನೀಡಿದರು. ಮತ್ತೆ ನನ್ನ ಡಬ್ಬಿ ನನ್ನ ಕೈ ಸೇರಿದಾಗ ಖಾಲಿ ಆಗಿತ್ತು-ಅಂಥ ಬೃಹತ್ ನಾಶಿಕ ದೇರಣ್ಣನವರದು. ದೇರಣ್ಣನವರು ಪೇಟ ಇಳಿಸಿ "ಕಳ್ಳರು-ಕಳ್ಳರು ...ಯಾರು ಕಳ್ಳರು!" ಎಂದು ಕನಸಿನ ಕಳ್ಳರನ್ನು ಹಿಡಿಯಲಾರದ ಸಂಕಟಕ್ಕೆ ಪರಿತಪಸಿದರು. "ಹೋಗಲಿ-ಬಿಡಿ ಇನ್ನೊಮ್ಮೆ ನಿಜವಾದ ಕಳ್ಳರನ್ನೆ ಹಿಡಿದರಾಯಿತು...." ಎಂದು ಅವರನ್ನು ಹಂಗಿಸಿದೆ. "....ಅಧ್ಯಕ್ಕಲ್ಲರಿ ಕೆಟ್ಟಕನಸಿಗೆ ಮೃಷ್ಟಾನ್ನ ಭೋಜನವೇ ಕಾರಣ—ಮೃಷ್ಟಾನ್ನ ಭೋಜನಕ್ಕೆ—ಮದುವೆಯ ಮನೆಯೇ ಕಾರಣ-ಮದುವೆಯ ಮನೆಗೆ ಕಳ್ಳರೇ ಕಾರಣ ..." ಎಂದು ಇನ್ನೊಂದು ಪಕೋಡ ಬಾಯಿಗೆಸೆದುಕೊಂಡರು. ನನಗೆ ಅರ್ಥವೇ ಆಗಲಿಲ್ಲ ದೊಡ್ಡ ವಗಟೆನಂತಿತ್ತು ಅವರ ಮಾತು. ಹಿಂದಿನ ದಿನ ಮದುವೆ ಮನೆ ಊಟ ಪಟ್ಟಾಗಿ ಹೊಡೆದಿದ್ದೆ ಹಣೆ ಎತ್ತರಿಸಿ ಮುಖಪ್ರಶ್ನಾರ್ಥಕ ಚಿನ್ಹೆಮಾಡಿದೆ. "ಗೊತ್ತು ನಿಮಗೆ ಅರ್ಥವಾಗವಿಲ್ಲವೆಂದು-ಈಗ ನೋಡಿ ಸಾವಂತ್ರಿ ಮದುವೆ-ಅಂದರೆ ಅರ್ಥಾತ್ ನನ್ನ ಮದುವೆ ಏರ್ಪಟ್ಟದು ಅವಳು ಕಳ್ಳಿ ಆದ್ದರಿಂದಲೆ-ನೋಡಿ ನನ್ನ ಹೃದಯವನ್ನು ಅಪಹರಿಸಿಬಿಟ್ಟಿದ್ದಾಳೆ...." ಎಂದು ನಸುನಕ್ಕರು. ನಿಜ ನನ್ನಾಕೆ ನನ್ನ ಹೃದಯವನ್ನಲ್ಲದೆ ನನ್ನ ಸ್ವಾತಂತ್ರ್ಯವನ್ನೂ ಅಪಹರಿಸಿದ್ದಾಳೆ—ಸಂಬಳ ಬಂದ ತಕ್ಷಣ ಇಡೀ ಗಂಟು ಅವಳ ಕೈಗೆ ಸೇರಬೇಕು—ನಶ್ಯಕ್ಕೆ ಅವಳು ವಿರುದ್ಧ ಆದ್ದರಿಂದ ಅದಕ್ಕಾಗಿ ಹಣ ಅವಳಿಂದ ಕದಿಯದಿದ್ದರೆ ಹೇಗೆ ಸಾಧ್ಯ? ಹೌದು ನಮ್ಮ ಸಂಸಾರ ಕಳ್ಳರೊಂದಿಗೇ ಸಾಗಿದೆ—ದ|| ದೇರಣ್ಣೋರು ಹೇಳಿದ್ದು ಅಕ್ಷರಶಃ ನಿಜ ಅವರೇ ಪ್ರಾರಂಭಿಸಿದರು "....ಇಂಥ ಹೃದಯ ಕಳ್ಳರಿಂದಲೇ ಮುಹೂರ್ತಗಳು ಕೂಡುವುದು—ಮನೆ ಮನೆಗೂ ಇಂಥಾ ಕಳ್ಳರಿದ್ದರೇ ಚೆನ್ನು—ಇಲ್ಲದಿದ್ದರೆ ಹೃದಯ ಚೋರಿಗೆ ಬೇರೆ ಇನಮು ಹುಡುಕಿದರೆ ಮನೆ ವಡಕು ತಾನೆ?—" ಬಹಿರಾಡಂಬರಕ್ಕೆ ಏನೂ ಅರಿಯದಂತಿರುವ ದೇರಣ್ಣೋರ ಮಾತು ಕೇಳಿ ಸುಸ್ತಾದೆ. "ಹೊತ್ತಾಯಿತು ಹೊದ್ದು ಮಲಗಿ—ನನ್ನ ಬೀಟನ ಶಾಸ್ತ್ರವೂ ಆಯಿತು—ಸಾವಂತ್ರಿ ಕಾದಿರುತ್ತಾಳೆ ನಾನೂ ಮನೆ ಸೇರುವೆ" ಎಂದು ಪೇಟ ಏರಿಸಿ ಓವರ್ ಕೋಟು ಹೊದ್ದು—ಹೃದಯಾಪಹಾರಿಯನ್ನು ನೆನೆದು ಠ್ರಪ್ ಠ್ರಪ್ ಎಂದು ಹೊರಟು ಹೋದರು. ನಾನೂ ಹೊದ್ದು ಮಲಗಿದೆ—ದ|| ದೇರಣ್ಣೋರ ಮಾತಿನ ಮಹಿಮೆಯೊ ಯೇನೊ—ತವರಿಗೆ ಹೋಗಿ ಪುಟ್ಟ ಪಾಪನನ್ನೆತ್ತಿದ್ದ ಮೀನಾಕ್ಷಿ—ಅಲ್ಲಿ ಸಂಸಾರದ ಮೋಹದ ಬಲೆಯಲ್ಲಿ ಸಿಲುಕಿದ ಕಳ್ಳ ಮೀನಾಕ್ಷಿ—ಕನಸಿನಲ್ಲಿ ನಲಿದಾಡಿದಳು.

—ದಾಶರಥಿದೀಕ್ಷಿತ್.

ಆಮರಣಾಂತ

ನಮ್ಮೂರಲ್ಲೊಂದು ಪ್ರೈಮರಿ ಸ್ಕೂಲಿದೆ. ಅಲ್ಲೊಬ್ಬರು ಮೇಷ್ಟರು. ಅವರ ಕೈಯಲ್ಲೊಂದು ಬೆತ್ತ.

ಪಟೇಲರ ಮಗನಿಗೆ ಏಟು ಬಿತ್ತು; ಅಳುತ್ತ ಹೋದ, ಹುಡುಗ. ಮೇಷ್ಟರಿಗೆ ತಕ್ಕ ಶಾಸ್ತಿಮಾಡದೆ ಇದ್ದರೆ, ಮಾಡುವ ತನಕ ಉಪವಾಸವ್ರತ ಆಚರಿಸುವುದಾಗಿ ಪಟೇಲರ ಹೆಂಡತಿ ಸಂಕಲ್ಪಮಾಡಿದರು.

ಪಟೇಲರು ಮೆಂಬರ ಮನೆ ಬಾಗಿಲಲ್ಲಿ ಉಪವಾಸ ಕೂತರು; ಮೇಷ್ಟರು ತಮ್ಮ ಮನೆಯಲ್ಲಿ ಉಪವಾಸ ಕೂತರು, ಪಟೇಲರು ಹಿಂದಕ್ಕೆ ಬಂದು, ತಮ್ಮ ಕ್ಷಮೆ ಬೇಡುವತನಕ.

ಮೆಂಬರು ಮಹಾಶಯರು ಈ ಅನ್ಯಾಯವನ್ನು ಪತ್ರಿಕೆಗೆ ಕಳುಹಿಸಿದರು. ಪಟೇಲರ ಉಪವಾಸವನ್ನು ಕೊಂಡಾಡಿದರು. ಏಟು ತಿಂದ ಹುಡುಗ ದಿನವೊಂದಕ್ಕೆ ಎಂಟು ಸಲ ಉಪವಾಸ ಕೂತ ಘೋರ ಸನ್ನಿವೇಶವನ್ನು ಫೋಟೊ ಸಹಿತ ಪ್ರಕಟಣೆಗೆ ಕಳುಹಿಸಿದರು.

ಪೇಪರಿನವರು, "ನಮ್ಮಲ್ಲಿ ಜಾಗ ಇಲ್ಲ; ಜಾಹಿರಾತುದರಕೊಟ್ಟರೆ, ಮಾತ್ರ, ಪ್ರಕಟಿಸಲಾಗುತ್ತೆ" ಅಂದರು.

ಅಪಮಾನ ಸಹಿಸಲಾರದೆ, ಮೆಂಬರು ಪತ್ರಿಕಾಲಯದ ಬಾಗಿಲ ಮುಂದೆ ಉಪವಾಸ ಕೂತರು. ಒಳಕ್ಕೂ ಹೊರಕ್ಕೂ, ಯಾರನ್ನೂ ಬಿಡದಂತೆ, ಅವರ ಅನುಯಾಯಿಗಳು ಬಾಗಿಲಲ್ಲೇ ಕೂತು, ನಾಡಿ ಹಿಡಿದು, ಟಮಟೆ ಬಡಿದು, ನೋಟೀಸ್ ಹಂಚಿ ಭಾಷಣಮಾಡಿ, ಲೌಡ್‌ಸ್ಪೀಕರ್ ಹಚ್ಚಿ, ರಿಕಾರ್ಡುಗಳನ್ನು ಬಾರಿಸಿದರು.


ಪತ್ರಿಕಾಲಯದ ಕೆಲಸನಿಂತಿತು. ಆದರೂ, ತಮಗೆ ದಿನಕೂಲಿ ಯಥಾ ಪ್ರಕಾರ ದೊರೆಯಲೇಬೇಕೆಂದು ಅಲ್ಲಿಯ ಕೆಲಸಗಾರರು ಪ್ರೆಸ್‌ಮಾಲೀಕರ ಮನೆ ಮುಂದೆ ಉಪವಾಸಕೂತರು.

ಕೂಲಿಕಾರರಪರ ಲಾಯರೊಬ್ಬರು ಅರ್ಜಿ ಸಲ್ಲಿಸಿದರು. ಆ ಲಾಯರ ಮನೆ ಮುಂದೆ, ಮಾಲೀಕರು ಉಪವಾಸ ಕೂತು, ಅರ್ಜಿಯಲ್ಲಿ ತಮ್ಮ ಮೇಲೆ ಮಾಡಿರುವ ಆರೋಪಣೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಘೋಷಿಸಿ, ಚೀಟಿ ಪ್ರಿಂಟಿಸಿ, ಹಂಚಿದರು.

ಅದನ್ನು ಹಂಚಿದವನ ಬಾಗಿಲಲ್ಲಿ ಆ ಲಾಯರು ಉಪವಾಸಕೂತರು, ಮಾಲೀಕರ ಪಿತೂರಿಗೆ ಆತ ಸಹಾಯಮಾಡಿ, ತನ್ನ ಅನ್ನಕ್ಕೆ ಕಲ್ಲು ಬೀಳಿಸಿದನಲ್ಲಾ, ಎಂಬ ಕೋಪದಿಂದ.

ಈ ಸುದ್ದಿಯನ್ನೆಲ್ಲ ಕೇಳಿ, ಪಾಪ, ಪಟೇಲರ ಮಗನಿಗೆ ಏಟುಕೊಟ್ಟು ಬಾಲಕನಿಗೆ ನೋವುಂಟುಮಾಡಿದೆನಲ್ಲಾ, ಎಂಬ ಸಂಕಟತಾಳಲಾರದೆ, ಕೇವಲ ಅಹಿಂಸಾ ಪ್ರಧಾನವಾದ ಆತ್ಮ ಶುದ್ಧಿಗಾಗಿ, ಪ್ರೈಮರಿ ಶಾಲೆಯ ಬೆತ್ತ, ತಾನೂ ಒಂದು ಮೂಲೆ ಹಿಡಿದು, ಉಪವಾಸ ಕೂತುಕೊಂಡಿತು—ಆಮರಣಾಂತ ಉಪವಾಸ.

—o—



"ನಮ್ಮದೇ ಪೇಪರ್ ಆದ್ರೂ, ಇನ್ನೊಬ್ರು ಓದುತ್ತಿರಬೇಕಾದ್ರೆ, ಇಣಕಿ ನೋಡಬಾರ್ದೂಂತ ಮ್ಯಾನರ್ಸ್ ಗೊತ್ತಿಲ್ಲವೇನ್ರಿ?"

ತಸ್ಕರೋಪಕಾರ

ನಮ್ಮ ಬೀದಿ ಕಡೇ ಮನೆಗೆ ಕಳ್ಳ ಬಂದ, ಹೋದ ಅಮಾವಾಸ್ಯೆ ದಿನ. ಬಂದವನು ಅವನ ಕೆಲಸ ಪೂರೈಸಿಕೊಂಡು, ಅವನ ಪೂರ್ವಾರ್ಜಿತ ಗಂಟನ್ನ ತೆಗೆದುಕೊಂಡು, ಅಡ್ರೆಸ್‌ನ್ನೂ ಕೂಡ ಬಿಟ್ಟು ಹೋಗದೆ, ಆಸಾಮಿ ಪರಾರಿ.

ಆದರೆ, ಆ ಮನೆಯವರಿಗೆ ಮಾತ್ರ ಇನ್ನೂ ಅವನ ಆಗಮನ-ನಿರ್ಗಮನದ ಕಥೆ ಮುಗಿದಿಲ್ಲ. ಪೋಲೀಸಿನವರ ಕಾಟವನ್ನು ಕುರಿತು, ನಾನು ಹೇಳುತ್ತಿಲ್ಲ. ಊರಿನವರ ಕಾಟ.

ಅದು ಹೇಗೆ ಅಂತೀರೋ?

ದಿನಬೆಳಗಾದರೆ, ಒಬ್ಬೊಬ್ಬರಾಗಿ ಬರ್‍ತಾರೆ.... "ಏನೋ ಒಂದು ಸಮಾಚಾರ ಕೇಳಿದೆನಲ್ಲಾ....ಯಾವಾಗ ನಡೆಯಿತು? ಎಷ್ಟು ಜನ ಬಂದರು? ಎಲ್ಲಿಂದ ಒಳಕ್ಕೆ ನುಗ್ಗಿದರು? ಒಡೆದ ಬೀಗ ಎಲ್ಲಿ? ನೀವೇನು ಮಾಡುತ್ತಿದ್ದಿರಿ? ಇವನ್ನೆಲ್ಲ ಏಕೆ ಬಿಟ್ಟು ಹೋದ?"—ಪ್ರಾರಂಭ, ಪ್ರಶ್ನೆಗಳ ಸುರಿಮಳೆ.

ಸರಿ! ಆ ಮನೆಯವರು ಅವರನ್ನು ಕೂರಿಸಿ ಎಬ್ಬಿಸಿ ಒಂದೊಂದಾಗಿ ಕಂಡಿ ಕಂಬಿ ಬಾಗಿಲು ಪೆಟ್ಟಿಗೆ ಹಿತ್ತಲು ಹಂಡೆ ಎಲ್ಲ ತೋರಿಸಿ, ಕಾಫಿ ಕೊಟ್ಟು, ಕಳುಹಿಸಬೇಕು. ಬಡಪೆಟ್ಟಿಗೆ ಹೋಗುವುದಿಲ್ಲ ಅವರು "ನಿಮ್ಮ ಮನೆಯಲ್ಲಿ, ಸದ್ಯಕ್ಕೆ, ೬೦೦ ರೂಪಾಯಿನಷ್ಟು ಒಡವೆ ನಗ ನಾಣ್ಯ ಹೋಯಿತು. ಆದರೆ, ನೋಡಿರಿ, ನಾವು ಅರಕಲಗೂಡಿನಲ್ಲಿದ್ದಾಗ...." ಷುರು! ಕಥೆಗಳು. ಕೇಳುತ್ತಾ ಕೇಳುತ್ತಾ, ಆ ಮನೆಯವರಿಗೆ, ನಾಚಿಕೆ ಆಗಬೇಕು. ಛೆ! ನಾವೂ ೫೦೦ ರೂಪಾಯಿ ನಗದು, ೨೪ ಸೇರು ಚಿನ್ನ, ಹೋಯಿತು, ಎಂದು ಬುರುಡೆ ಬಿಡದೆ ಇದ್ದರೆ, ಈ ಊರಲ್ಲಿ ನಮಗೆ ಮಾನ ಬರುವುದಿಲ್ಲ, ಎಂದು ಅವರು ಸಂಕಲ್ಪ ಮಾಡಲೇಬೇಕಾಗುತ್ತದೆ. "ಬನ್ನಿ! ನಮ್ಮ ಮನೆಗೆ....ನಮ್ಮ ಮನೆಯಿಂದಲೂ ಒಂದು ಹಿತ್ತಾಳೆ ಚೊಂಬು.... ಮೊನ್ನೆ....ವರಾಂಡಾದಲ್ಲಿರಿಸಿದ್ದೆವು....ಬನ್ನಿ! ಅದು ಹೋದ ರೀತೀನ್ನೂ ತೋರಿಸುತ್ತೀವೆ" ಎಂದು ಆಹ್ವಾನಿಸಿ ಅವರು ಹೊರಡುತ್ತಾರೆ. ಯಾವ ಸಾಮಾನನ್ನೂ ಕಳೆದುಕೊಳ್ಳದೆ, ಯಾವೊಂದು ಬಾರಿಯೂ ಕಳ್ಳ ನುಗ್ಗದೆ ಇರುವ ಮನೆಯವರು ಅಲ್ಲಿಗೆ ಹೋಗುವಂತೆಯೇ ಇಲ್ಲ.

ಇನ್ನು ಕೆಲವರು ಬರುತ್ತಾರೆ, ಆ ಮನೆಗೆ. ಅವರು, "ಹ್ಯಾಗೆ ಬಂದ, ಅವನು? ಈ ಇಟ್ಟಿಗೆಯನ್ನ ಹ್ಯಾಗೆ ಕಳಚಿದ? ಎಷ್ಟು ದಪ್ಪದ ಹಾರೆ ತಂದಿದ್ದ? ಚಿಲುಕವನ್ನು ಹ್ಯಾಗೆ ಮೇಲಕ್ಕೆತ್ತಿದ?....ಎಲ್ಲಿ? ಅಲ್ಲಿಂದ ಕೈ ನೀಡಿ, ಈ ಕಡೆ

ಅಗಳಿಯನ್ನೆ ಳಿಯಿರಿ ನೋಡುವ...." ಇತ್ಯಾದಿ ತಸ್ಕರ ಶಾಸ್ತ್ರದ ಪಾಯಿಂಟುಗಳನ್ನೇ ತೆಗೆಯುತ್ತಾರೆ. ನಷ್ಟ ಎಷ್ಟಾಯಿತು, ಸಹತಾಪ ಎಷ್ಟು ಬೇಕು, ಎಂಬುದರ ಮೇಲೆ ಅವರಿಗೆ ನಿಗ ಇಲ್ಲ. ಅವರದು ಕೇವಲ ಶಾಸ್ತ್ರೀಯ ದೃಷ್ಟಿ. "ನೀವಿಲ್ಲಿ ಮಲಗಿದ್ದರೂ, ನಿಮಗೆ ಗೊತ್ತಾಗದೆ, ನಿಮ್ಮ ತಲೆ ದೆಸೆಯಲ್ಲಿ ಇಂಥ ಭಾರಿ ಕಲ್ಲು ಮಡಗಿ, ಹೀಗೆ ಹಾದುಹೋಗಿ, ಹಾಗಿಂದ ಪೆಟ್ಟಿಗೆ ತಂದು, ಅಲ್ಲಿ ಕೂತುಕೊಂಡು.... ಹಾ!....ತ್ಸು ತ್ಸು ತ್ಸು ..." ಎಂದು ಅವರು ಆ ಕಳ್ಳರ ಕುಶಲತೆಗೆ ತಲೆದೂಗುತ್ತಿರುವು ದನ್ನು ನೋಡಿದರೆ, ಎರಡು ಬಿಗಿಯೋಣವೆನಿಸುತ್ತದೆ. ಇಂಥ ಜಾಣರ ಒಂದು ರಾತ್ರಿಯ ಕೆಲಸಕ್ಕೆ, ಕೇವಲ ೬೦೦ ರೂಪಾಯಿ ಮಾಲು ಸಾಲದೆಂದೇ ಅವರ ಅಭಿಪ್ರಾಯ, ಎಂಬುದು ಮನೆಯವರಿಗೆ ಸ್ಪಷ್ಟವಾಗುತ್ತದೆ.

ಇನ್ನು ಕೆಲವರು : ಹೇಡಿಗಳು; ಏನು ಮಾಡುವುದ್ರಿ? ಇಂಥ ಕಾಲ ಬಂತಲ್ಲಾ? ಹೇಗ್ರಿ ಮನೆಯೊಳಗಿರೋದು? ಪ್ರಾಣ ಮಾನ ಎರಡೂ ಈ ಪೋಲೀಸರ ಕೈಗೊಪ್ಪಿಸಿ ಹೇಗಮ್ಮ ಹಾಯಾಗಿ ಮಲಗುವುದು? ಎಂಥ ಕಲಿಕಾಲ? ಈ ಊರೇ ಹಾಳು ಹೀಗೆ, ಎಂದು ನಡುಗುತ್ತಾ ಗದ್ಗದಿಸುತ್ತಾ, "ನೀವು ಎಲ್ಲಿಗಾದರೂ ದೇಶಾಂತರ ಹೊರಟು ಬಿಡ್ರಮ್ಮ....ಪೆಟ್ಟು' ಬಿದ್ದ ಕಡೆಗೇ ಮತ್ತೆ ಪೆಟ್ಟುಬೀಳುತ್ತೆ....ಇರುವುದನ್ನೆಲ್ಲ ಮಾರಿ ಬ್ಯಾಂಕಿನಲ್ಲಿಡಿ....ಸೊಸೆಯನ್ನ ಅವಳ ತೌರುಮನೆಗೆ ಕಳುಹಿಸಿ ಮಡಲು ಗಿಡಲು ಏನೂ ಬೇಡ, ಪಾಸೂ ಅಂತ ಒಂದಾದರೆ ಸಾಕು ಅಂತ ಮಗನಿಗೆ ಬರಿಯಿರಿ." ಎಂದು ಉಪದೇಶಿಸುವರು.

ಎಲ್ಲರಿಗಿಂತ, ವೇದಾಂತಿಗಳದೇ ಸಂಖ್ಯೆ ಜಾಸ್ತಿ. "ಋಣಾನುಬಂಧ ರೂಪೇಣ...." ಅಂತ ಶ್ಲೋಕ ಹೇಳಿಕೊಂಡು, ಅವರು ಆ ಮನೆಗೆ ನುಗ್ಗಿದ್ದೇ ತಡ, ಮನೆಯಾತ ಪಾನಕಕ್ಕೆ ನಿಂಬೆಹಣ್ಣನ್ನು ತರಲು ಹುಡುಗನನ್ನು ಅಂಗಡಿಗೆ ಕಳುಹಿಸು ತ್ತಾನೆ. ಕರ್ಮ, ಕರ್ಮಫಲತ್ಯಾಗ ನಹಿಕಲ್ಯಾಣಕೃತ್ ಕಶ್ಚಿದ್, ಓಮಿತ್ಯೇಕಾ ಕ್ಷರಂ ಬ್ರಹ್ಮ, ರಜ್ಜುಸರ್ಪನ್ಯಾಯ, ಮಾಯೆ, ಕ್ಷೀಣೋಪುಣ್ಯೇ ಮರ್ತ್ಯ ಲೋಕಂ ವಿಶಂತಿ ...ಎಲ್ಲವೂ ಸಾಂಗವಾಗಿ ನಡೆಯುತ್ತದೆ. ನಿವಾತ ನಿಷ್ಕಂಪಮಿವ ಪ್ರದೀಪಂ, ಎಂಬಲ್ಲಿಗೆ ಅಧ್ಯಕಥಾಮಂಗಳ ಮಸ್ತು, ಎಂದೆನಿಸಿ, ಬಂದವರು ಎರಡು ರೂಪಾಯಿ ಸಾಲ ಇಸುಕೊಂಡು, ಮನೆಗೆ ಹೋಗ್ತಾರೆ, ಒಂದು ರೂಪಾಯಿ ಶಂಕರ ಜಯಂತಿ ಚಂದಾಹಣ ಬೇರೆ.

ಅಂತೂ, ಕಳೆದ ಅಮಾವಾಸ್ಯೆವರೆಗೂ ಯಾರು ಎತ್ತ ಎಂದು ಯಾರಿಗೂ ಗೊತ್ತಿಲ್ಲದೆ ಇದ್ದ ಆ ಕಡೇ ಮನೆಯವರು ಈಗ, ಆ ಕಳ್ಳರ ದೆಸೆಯಿಂದ, ಪ್ರಖ್ಯಾತ ರಾಗಿದ್ದಾರೆ; ಎಲ್ಲರ ಪ್ರೀತಿ ಗೌರವ ವಿಶ್ವಾಸ ಸಹಾನುಭೂತಿಗಳನ್ನೂ ಸಂಪಾದಿಸಿ ದಾರೆ....ನಾಳೆ ಇಲೀಕ್ಷನಿಗೆ ನಿಂತರೆ, ಕಳೆದುಕೊಂಡದ್ದನ್ನ ಗಿಟ್ಟಿಸಿಕೊಳ್ಳಬಹುದೆಂಬ ಭರವಸೆ ಅವರಲ್ಲಿ ಮೂಡಿದೆ.

—ಶೇವಣ್ಣ.

ಯಾತ್ರಿಕರ ಪತ್ರ

ಈಗ್ಯೆ ಮೂರು ವರ್ಷಗಳಿಂದ ನಮ್ಮ ಯಾತ್ರೇನ ಮಧ್ಯದಲ್ಲೇ ನಿಲ್ಲಿಸಬೇಕಾಯ್ತು. ನಿಮಗೂ ಎಷ್ಟೋ ನೆಮ್ಮದಿ ಇತ್ತು. ನಮಗಂತೂ ಈ ಅಜ್ಞಾತವಾಸ ಬಹಳ ಬೇಜಾರು ಮಾಡಿದೆ. ಮೊನ್ನೆ ರಾಜಾ ಚಂದೀ ಇಬ್ಬರೂ ನನ್ನ ಹುಡುಕಿಕೊಂಡು ಬಂದರು. ನನ್ನ ಪರ್ಸು, ಸಿಗರೇಟು ಅವಸರದಲ್ಲಿ ಬಚ್ಚಿಟ್ಟು ರಿಸರ್ವ್ ಹ್ಯಾಪ್ ಮೋರೆ ಹಾಕ್ಕೊಂಡು ಹಲ್ಕಿರಿದು ಒಳಕ್ಕೆ ಕರೆದೆ.

"ತಲಕಾಡಿಗೆ ಹೋಗೋಣವೇನಯ್ಯಾ?" ಅಂದ ರಾಜ. ರಾಜನಿಗೆ ನಾಲ್ಕನೇ ಹೆಣ್ಣು ಕೂಸು ಆದಾಗಿನಿಂದ ಅವನ ನಡತೆ ಸ್ವಲ್ಪ ಬದಲಾಯಿಸಿದೆ. ಆದರೂ ಇಷ್ಟಕ್ಕೆ ಬರುತ್ತೇಂತ ತಿಳಿದಿರಲಿಲ್ಲ. ಚಂದೀ ಕಡೆ ತಿರುಗಿದೆ.

"ಹೌದಯ್ಯಾ. ನಾನೂ ರಾಜಾ ಯೋಚನೇ ಮಾಡಿದ್ದೇವೆ. ಈ ಊರು ಸ್ವಲ್ಪ ಬಿಸಿಯಾಗಿದೆ. ಪಂಚಲಿಂಗ ದರ್ಶನ ಮಾಡಿಕೊಂಡು, ಹಾಗೇ ಶ್ರವಣಬೆಳಗೊಳಕ್ಕೂ ನುಗ್ಗಿ ಬರೋಣಾಂತ....ನೀನೂ ಬಂದರೆ....ದೇವರ ದರ್ಶನ...."

"ಯಾವಾಗ ಹೊರಡೋಣ?" ಅಂದೆ ಮೈ ಬೆವರೊರಸಿಕೊಳ್ಳುತ್ತಾ. ನಂಗೂ ಈ ಊರು ಬಿಡೋಕೆ ಸಾಕಷ್ಟು ಕಾರಣ ಇತ್ತು.

ನಾವು ಯಾತ್ರೆ ಹೊರಟು ಬಹಳ ದಿನಗಳಾಗಿದ್ದರಿಂದ ಅದರ ಕಷ್ಟ ಸುಖಗಳು ಮರೆತಿದ್ದೆವು.

"ತಲಕಾಡಿಗೆ ಬಸ್ಸಿನಲ್ಲಿ ಹೋಗೋಣ" ಅಂದ ಚಂದಿ. ಅದಕ್ಕೆ ರಾಜಾ ಒಪ್ಪಲಿಲ್ಲ. "ಬಸ್ಸು ಬೇಡ. ರೈಲ್ನಲ್ಲಿ ಹೋಗೋಣ. ಬಸ್ಸಿನಲ್ಲಿ ಧೂಳು ಜಾಸ್ತಿ. ನಮ್ಮ ಸೈಕಲ್ ಇಡೋಕಾಗೋಲ್ಲ." ಅಂಧ.

ನೆಹರೂಗೆ ಬರೀಬೇಕು. ಈ ಐದು ವರುಷದ ಯೋಚನೇಲಿ—ಅಥವಾ ಯೋಜನೇನೊ?—ಏನೋ ಎರಡೂ ಒಂದೇ—ಅಂತೂ ಅದರಲ್ಲಿ ಬೆಂಗಳೂರಿಂದ ತಲಕಾಡಿಗೆ ರೈಲ್ಲಾಕಿ ಅಂತ ಬರೀಬೇಕು.

ಐದು ವರುಷ....ಹಾಗೇ ನಾವು ತಲೆ ತಪ್ಪಿಸಿಕೊಂಡಿದ್ದು, ಈ ಯೋಜನೇನೋ ಯೋಚನೇನೋ ಎಲ್ಲಾ ಮುಗಿದ ಮೇಲೆ ನಮ್ಮ ದೇಶಕ್ಕೆ ಬಂದರೆ ಹೇಗಿರುತ್ತೋ

ನಮ್ಮ ದೇಶ! ನಮಗೇನಾಗಿರೊಲ್ಲ ಅನ್ನಿ. ಐದೊರುಷ ಮುಪ್ಪು ಹತ್ತಿರವಾಗಿರುತ್ತೆ- ನಮ್ಮನ್ನು ಅಷ್ಟರಲ್ಲಿ ಹಾದುಹೋಗದೇ ಇದ್ದರೆ! ನಮಗೇನು ಈ ಐದೊರುಷದ ಯೋಜನೆಗಳು ಹೊಸದಲ್ಲ. ನಾನು ರಾಜ ಚಂದಿ ನಮ್ಮ ಪರೀಕ್ಷೆಗಳನ್ನೆಲ್ಲಾ ಆ ಯೋಜನೆಯಲ್ಲೇ ದಾಟಿದ್ದು. ನಮ್ಮ ಚಿಕ್ಕಂದಿನಲ್ಲಿ ಒಂದು ಕಥೆ ಕೇಳಿದ್ದೆವು. ಐದು ಜನ ಕುರುಡರು ಒಂದು ಆನೆಯನ್ನು ವರ್ಣಿಸಹೋಗಿ ಒಬ್ಬೊಬ್ಬರೂ ಒಂದೊಂದು ವಿಧವಾಗಿ ವರ್ಣಿಸಿದರಂತೆ ಹಾಗೇ ನಾವು ಹೋದಕಡೇ ಎಲ್ಲಾ ಈ ಐದು ವರ್ಷದ ಯೋಜನೇನ ನಮ್ಮ ಜನ ತರಹಾವಾರಿ ತಿಳಿದಿದ್ದಾರೆ.

ನಾವು ಮೈಸೂರಲ್ಲಿಳಿದು ಒಂದು ಹೋಟಲಿಗೆ ನುಗ್ಗಿದೆವು. ನಮ್ಮ ಪಕ್ಕದ ಟೇಬಲ್‌ನಲ್ಲಿ ನಾಲ್ಕು ಜನ—ಕಾಲೇಜ್ ಸ್ಟೂಡೆಂಟ್ಸ್ ಅಂತ ಕಾಣುತ್ತೆ—ಕೂತು ಬಹಳ ಬಿರುಸಾಗಿ ವಾಗ್ವಾದ ಮಾಡುತ್ತಿದ್ದರು.

ಒಬ್ಬ—"ಲ್ರೋ, ಈ ಪರೀಕ್ಷೆಗಳನ್ನೆಲ್ಲಾ ನಿಲ್ಲಿಸಬಿಡಬೇಕ್ರೋ. ನಿಮ ಗೊತ್ತೇನ್ರೋ—'A fool can ask what the wisest cannot answer' ಅಂತ?" ಮತ್ತೊಬ್ಬ "ಹೌದೋ. ಈ ಪರೀಕ್ಷೆ ರಿಸಲ್ಟ್ ಮೇಲೆ ನಮ್ಮನ್ನು ಫೇಲ್ ಮಾಡಿಸೋದು ಶುದ್ಧ ಅನ್ಯಾಯ".

ರಾಜ ಚಂದಿ ಇಬ್ಬರೂ (ಮೈಮರೆತು) 'Hear-Hear!' (ನಾನಿಬ್ಬರನ್ನೂ ಚಿವುಟಿದೆ)

ಇನ್ನೊಬ್ಬ—"ಸುಮ್ಮನೇ ಇರ್ರೋ. ಇನ್ನೈದು ವರ್ಷ ಹಾಗೂ ಹೀಗೂ ಉಸಿರದಿಮಿಕೊಂಡಿದ್ದರೆ ಈ ಪರೀಕ್ಷೆಗಳಿಗೆಲ್ಲಾ ತಿಥಿಮಾಡ್ತಾರೆ. ನಮ್ಮ ವಿದ್ಯಾ ಭ್ಯಾಸಾನೇ ಬದಲಾಯಿಸ್ತಾರಂತೆ"

ನಾಲ್ಕನೆಯವ "ಆಗ ನಾವೆಲ್ಲಾ ಗ್ರಾಜುಯೆಟ್ಸೇಕಣ್ರೋ...." ನಮ್ಮ ಕಾಫೀ ಕಪ್ಪುಗಳು ಖಾಲಿಯಾಗಿ ಕೈಲಿ ಬಿಲ್ಲು ಬಂದಿದ್ದರಿಂದ ದುಡ್ಡುತೆತ್ತು ಹೊರಗೆ ಬಂದೆವು.

ರಾಜ ಅಂದ "ಏನ್ರೋ ನೋಡಿದಿರೇನ್ರೋ ಈ ಕಾಲದ ಸ್ಟೂಡೆಂಟ್ಸು? ನಾವು ಓದ್ತಾ ಇದ್ದಾಗ........"

ಚಂದಿ ನಗುತ್ತಾ "ಹೌದೊ. ನಾವು ಓದ್ತಾ ಇದ್ದಾಗ....ಈ ಸ್ಟಾಂಡರ್ಡ್‌ಗೇ ಬರಲಿಲ್ಲವಲ್ಲೋ...." ಅಂದ.

ಅಷ್ಟರಲ್ಲಿ ನಮ್ಮೆದುರ ಫುಟ್‌ಪಾತಿನಮೇಲೆ ಏನೋ ಗಲಾಟೆ ಎದ್ದಿತು. ಇಬ್ಬರು ಕಾಕಿಬಟ್ಟೆ ಪೋಲೀಸು ಕನಿಷ್ಟ ಬಿಲ್ಲೆಗಳೂ ಇದ್ದರು. ಏನೋ ಜಗಳದ ಮಜಾ ಅಂತ ನಾವೂ ನುಗ್ಗಿದೆವು. ರಾಜ ಚಂದಿ ಗುಂಪೊಳಕ್ಕೇ ನುಗ್ಗಿದರು. ನನಗೀ ನಡುವೆ "ಬ್ಲಡ್ ಪ್ರೆಷರ್" ಅಂತ ನಮ್ಮ ಡಾಕ್ಟರ್ ಹೇಳಿದ್ದರಿಂದ ನಾನು ಹೊರಗೇ ನಿಂತೆ. ಹಾಗಾಗಿ ನನಗೆ ಹೊಡೆದಾಟ ಕಾಣಿಸಲಿಲ್ಲ. ಕೇಳಿದ್ದು ಜ್ಞಾಪಕವಿದೆ.

"ಏನಯ್ಯಾ–ನಿನ್ನ ಗಂಟ್ನಲ್ಲಿ ಬಟ್ಟೆ ಇದೆ ಅಂತ ಹೇಳ್ದಿ. ಈ ಅಕ್ಕಿ ಎಲ್ಲಿಂದ ಬಂತಯ್ಯಾ ?"

"ಈ ಅಕ್ಕಿ ನಂದೇ ಸ್ವಾಮಿ. ಮನೇಗೆ ತಕ್ಕೊಂಡು ಹೋಗ್ತಾ ಇದ್ದೇನೆ."

"ರೈಲಿನಲ್ಲಿ ಹೇಗಯ್ಯಾ ಸಾಗಿಸಿದೆ ಇದನ್ನ ?"

"ಕೈನಾಗ್ಹಿಡುಕೊಂಡಿದ್ದೆ ಸ್ವಾಮಿ"

ಕರತಾಡನ!!

"ತಲೆಯೆಲ್ಲಾ ಹರಟಬೇಡಯ್ಯಾ. ಎಲ್ಲಿಂದ ತಂದೆ?"

"ಫ್ರೆಂಚ್‌ರಾಕ್ಸ್‌ನಾಗೆ ನನ್ನ ಮಗಳಿದ್ದಾಳೆ ಸ್ವಾಮಿ. ಅವಳು ಕೊಟ್ಲು"

"ನಡಿ ಸ್ಟೇಷನ್ನಿಗೆ ನಿನ್ನ ಮೂಟೇ ತಕೊಂಡು. ಇದು ಕಾನೂನಿಗೆ ವಿರುದ್ಧ...."

ಅಷ್ಟರಲ್ಲಿ ರಾಜನ ಧ್ವನಿ ಕೇಳಿಬಂತು.

"ಅಲ್ರೀ, ಈ ೩–೪ ಸೇರಕ್ಕೀಗೆ ಏನು ಕಾನೂನು ರೀ ? ಬಿಟ್ಟು ಬಿಡಿ ಪಾಪ"

"ನೀವೇನು ನಮ್ಗ್ರಾಫೀಸರೇನ್ರೀ? ನೀವು ಸುಮ್ಮನೆ ಇರಿ ಸಾರ್" ಅಂತ ಗದರಿಸಿದ ಕಾಕಿ ಬಟ್ಟೆ ಕಾನೂನ್‌ದಾರ.

ಆಗ ಚಂದಿ ಮುಂದೆ ಬಂದ. ರಾಜ ನನ್ನ ಪಕ್ಕಕ್ಕೆ ಬಂದ.

"ಅಲ್ಲಯ್ಯಾ, ಈ ಬಡ ಮನುಷ್ಯನ ೩–೪ ಸೇರಕ್ಕಿ ಸಾಗಿಸಿದ್ದಕ್ಕೆ ಸತಾಯಿಸ್ತೀಯಲ್ಲಾ. ಮೊನ್ನೆ ಆ ಸಾಹುಕಾರ....ರವರ ಮನೇಲಿ ಸಂತರ್ಪಣೆ ದಿನ ಅವರು ಬಿಸಾಡಿದ್ದ ಎಂಜಲೆಲೇಲಿ ಮೂವತ್ತು ಸೇರಕ್ಕಿ ಅನ್ನ ಇತ್ತಂತಲ್ಲಾ. ಅವರಿಗೇನು ಮಾಡಿದಿರಿ? ನಿಮ್ಮ ಕಾನೂನು ಕಾನನಕ್ಕೆ ಹೋಗಿತ್ತೆ?" (ಚಂದಿ ಈಗೀಗ ಸಾಹಿತಿಯಾಗುತ್ತಿದಾನೆ)

ಆಗ ಆ ಗೌಡನೇ ಸಮಾಧಾನ ಮಾಡಿದ. "ಬಿಡಿ ಸ್ವಾಮಿ. ಈ ೩ ಸೇರಕ್ಕಿ ಅವರು ಬೇಕಾದ್ರೆ ತಕೊಳ್ಳಿ. ನನ್ನೂ ಕರ್ಕೊಂಡು ಹೋಗಲಿ. ಇನ್ನೆಷ್ಟು ದಿನ ಕಾಟ ಕೊಟ್ಟಾರು? ನಮ್ಮ ನೆಹ್ರು ಅಪ್ಪ ಇನ್ನೈದು ವರ್ಷದಾಗ ದೇಶದಲ್ಲೆಲ್ಲಾ ಕೆರೆ ಕುಂಟೆ ಭಾವಿ ತೋಡಿಸಿ ಈ ಕಾಳ್ ಕಾಳಕ್ಕೀಗೆ ನಾವು ಪಡೋ ಕಷ್ಟಾನೆಲ್ಲಾ ಕೊನೆಗಾಣಿಸ್ತಾರಂತೆ" ಅಂದ.

ನಾವು ನಿಷದ್ ಬಾಗಿಗೆ ಸೈಕಲ್ ತಿರುಗಿಸಿದೆವು. ಹಗಲೆಲ್ಲಾ ರೈಲು ಪ್ರಯಾಣದ ಸುಸ್ತು. ತಂಪಾಗಿ ನಿದ್ದೆ ಹತ್ತಿತು ಪಾರ್ಕಿನಲ್ಲಿ....ನಾನು ರಾಜಾ ಚಂದೀ ಒಂದು ದೋಣೀಲಿ ಹೋಗ್ತಾ ಇದ್ದೇವೆ. ದೋಣೀಲಿ ಇನ್ನೂ ಮೂರು ಜನಗಳಿದ್ದಾರೆ. ಇದಕ್ಕಿದ್ದ ಹಾಗೇ ಪ್ರವಾಹ ಜಾಸ್ತಿಯಾಗಿ ದೋಣಿ ವಾಲಿತು. ಮರುಕ್ಷಣ ನಾವೆಲ್ಲಾ ನೀರುಪಾಲು! ಐದಾರು ಕೊಡದಷ್ಟು ಬೆವರು ನೀರಲ್ಲಿ ಬೆಚ್ಚಿ ಎದ್ದೆ.

ಆಗ ರಾಜ ಅಂದ "ಈಗಲೇ ನಿಷದ್ ಬಾಗ್ ಸುಖಪಡೋ. ನಾಳೆ ಇದೂ ಒಂದು ಕೆರೆಯಾಗ್ಬಿಟ್ಟೀತೂ" ಅಂತ.

ನನ್ನ ಕನಸನ್ನ ಹೇಳೋಕೆ ಬಾಯಿ ಬರಲಿಲ್ಲ.

—ಶೇಷ.

ನಾದಿನಿಯ ನಾಚಿಕೆ

ಕೊನೆಗೂ ಸಿಕ್ಕಿತು, ಟ್ಯಾಕ್ಸಿ. ಆ ಊರಲ್ಲಿ ಇದ್ದದ್ದೇ ಎರಡು, ಜಾಂಬವಂತ ಕಾಲದ್ದು. ಎರಡೂ ಬೆಳಗ್ಗಿನಿಂದ ಎಲ್ಲೋ ಪರಾರಿ. ಪಕ್ಕದ ಊರಲ್ಲಿ ಸಂತೆ, ಕಂಬಳಿ ಮೂಟೆ, ಕೋಳಿ ಗೂಡೆ, ಹಲಸಿನ ಹಣ್ಣು, ಇತ್ಯಾದಿ ಹೇರಿಸಿ, ಹೊಡೆಯುತ್ತಿದ್ದರು ಸವಾರಿ. ನಮ್ಮ ಕೈಗೆ, ಒಂದು ಟ್ಯಾಕ್ಸಿ ಸಿಕ್ಕಿದಾಗ, ಮಧ್ಯಾಹ್ನ ಕಳೆದು ಬಿಸಿಗಾಳಿ ಉರಿಗಾಳಿಯಾಗಿ ಉಸಿರುಕಟ್ಟಿ ನಿಂತಾಗ, ಎರಡೂ ಕಾಲು ಗಂಟೆಗೆ.

ನಾವಿದ್ದದ್ದು, ೧೩ ಮಂದಿ ಸಂಖ್ಯೆಗೇನೂ ಜಗ್ಗಲಿಲ್ಲ, ಟ್ಯಾಕ್ಸಿಯವ. ಕೂಲಿಗೆ ಚೌಕಶಿಮಾಡಿದ. ಅಷ್ಟೆ. ಇಲೆಕ್ಷನ್ ಗಲಾಟೆಯಲ್ಲಿ ಟಾಪ್ ತೆಗೆದು ೨೮ ಜನರನ್ನ ಕೂರಿಸಿ ಕರ್ನೂಲಿಗೆ ಹೊಡೆದಿದ್ದನಂತೆ, ಆದರೆ, ಅವತ್ತು ಆ ಕೆಂಡಕಾರುವ ಟಾಪ್ ತೆಗೆಯಲು ನಾವೊಪ್ಪಲಿಲ್ಲ. ಅವನೂ ಬಲವಂತಪಡಿಸಲಿಲ್ಲ.

ಇಷ್ಟು ಜನ ಆ ವಾಹನದಲ್ಲಿ ಕೂರುವುದು ಹೇಗೆ? ಅಕ್ಕ ಪಕ್ಕದ ಮೂರು ಮನೆಯವರು, ನಾವು; ಸ್ನೇಹಿತರು. ಹೊರತು, ಒಂದೇ ಸಂಸಾರದವರಲ್ಲ. ಮೂರು ದಂಪತಿಗಳು, ಅಂದರೆ, ೬; ಇಬ್ಬರು ತಾತಂದಿರು, ಒಬ್ಬರು ಚಿಕ್ಕಮ್ಮ; ಒಬ್ಬರು ನಾದಿನಿ; ೧೨, ೧೩ ವರ್ಷದ ಹುಡುಗರಿಬ್ಬರು, ೧೫ ವರ್ಷದ ಹುಡುಗಿ ಒಂದು; ಅಲ್ಲದೆ, ಕೈ ಕೂಸುಗಳು ೩ ಡ್ರೈವರೊಬ್ಬ, ಅವನ ಸಹಾಯಕ್ಕೆ ಒಬ್ಬ ಹುಡುಗ; ಬೇಡಬೇಡವೆಂದರೂ, ಬಿಡದೆ ಅಂಟಿಕೊಂಡಿದ್ದ ಧಾಂಡಿಗ ಅವನ ಗೆಳೆಯನೊಬ್ಬ.

ಡ್ರೈವರಂತೂ, ಕೈ ಚಕ್ರದೆದುರು ಕೂರಲೇಬೇಕು, ವಿಧಿಇಲ್ಲ. ೧೯ ಅಂಗುಲದಷ್ಟು ಜಾಗ ಅವನಿಗೆ ಮೀಸಲು. ಅವನ ಹುಡುಗ ಅವನ ಗೆಳೆಯ, ಇವರಿಬ್ಬರೂ, ನಮ್ಮನ್ನು ನೋಡುತ್ತಲೂ, ತಮಗೆ ಮಡ್‌ಗಾರ್ಡುಗಳೇ ಗತಿ ಎಂಬ ನಿರ್ಧಾರಕ್ಕೆ ಬಂದು, ಅಲ್ಲೇ ಕೂತು, ಬಲ್ಬಿಲ್ಲದ ದೀಪಗಳನ್ನು ತಬ್ಬಿದರು.

ಉಳಿದ ಜಾಗ–ವಿಶಿಷ್ಟ, ನಮಗೆ ಮೋಟಾರ್ ಸವಾರಿ, ನೋಟದಯಾತ್ರೆ, ಅನೇಕ ದಿನಗಳ ಹಂಬಲಿಕೆಯ ಕೈ ಗೂಡುವಿಕೆ ಅಂದ ಮೇಲೆ, ದಂಪತಿಗಳು ಮೂರು ಜೊತೆ, ಆರು ಜನವೂ ತಮ್ಮ ತಮ್ಮ ಕೈಗೂಸುಗಳನ್ನು ತೊಡೆಯ ಮೇಲಿರಿಸಿಕೊಂಡು ಗಂಡ ಹೆಂಡತಿ ಹೆಂಡತಿ ಗಂಡ ಗಂಡ ಹೆಂಡತಿ ಎಂಬ ಸಾಲನ್ನು ರಚಿಸಿ, ಒಟ್ಟಿಗೆ ಹಿಂದಿನ ಸೀಟಿನಲ್ಲಿ ಕೂರಬೇಕೆಂದು ಹಟ ತೊಟ್ಟರು; ನ್ಯಾಯವೆ; ಕೂರಬೇಕಾದದ್ದೆ. ಆದರೆ.... ಜಾಗ?

ಡ್ರೈವರ್ ಹೇಳಿದ: "ಗಂಡ ಗಂಡ ಗಂಡ, ಹಿಂದಿನ ಸೀಟು ಮಧ್ಯ ಕೂಡಿರಿ; ಆಚೆ ಈಚೆ ಅದೇಸೀಟಿನಲ್ಲಿ ಚಿಕ್ಕಮ್ಮ ನಾದಿನಿ, ಒಟ್ಟು ಐದು!" ಆದರೆ, ಚಿಕ್ಕಮ್ಮನಿಗೆ ಕೋಪ, ನಾದಿನಿಗೆ ನಾಚಿಕೆ ಕಡೆಗೆ, ವಿಧಿಇಲ್ಲದೆ, ಅವರಿಬ್ಬರೂ ಒಪ್ಪಿದರು.

ಮೇಲಿನ ಸೀಟಿನಲ್ಲಿ ಕೂತ ಗಂಡಂದಿರ ಹೆಂಡಿರು ಆಯಾ ಗಂಡರ ಪಾದ ತಳದಲ್ಲಿ ಕೂರುವುದು, ಎಂದ ಡ್ರೈವರ್, ನ್ಯಾಯ, ಎಂದೆವು, ನಾವು. ಕೈ ಚಪ್ಪಾಳೆ ತಟ್ಟಿದುವು ಕೈ ಕೂಸುಗಳನ್ನು ಆಯಾ ತಾಯಂದಿರು ಆಯಾ ತಂದೆಯರಿಗೆ ಕೊಟ್ಟುಕೊಂಡು ಸಮಾಧಾನ ಪಡಿಸುವುದು ಎಂದು ತೀರ್ಮಾನಿಸಿದೆವು. ಒಟ್ಟು, ಎಂಟಾಯಿತು. ಮುಂದಿನ ಸೀಟಿನ ಒರಗುದಿಂಬಿನ ಮೇಲೆ, ಅತ್ತಕಡೆ ಒಂದು ಕಾಲು ಇತ್ತಕಡೆ ಒಂದು ಕಾಲು, ಕೈಗಳೆರಡೂ, ಟಾಪಿನ ಕಡ್ಡಿಯನ್ನು ಹಿಡಿದು—ಹೀಗೆ, ಆರೋಹಿಸಿದೆವು, ೧೨, ೧೩ ವರ್ಷದ ಬ್ರಹ್ಮಚಾರಿ ಚೇಷ್ಟೆ ಹುಡುಗರನ್ನು ಬಲುಮೊಂಡು, ಕಪಿಗಳು, ಅವು. ಬಡಪೆಟ್ಟಿಗೆ ಒಪ್ಪಲಿಲ್ಲ, ಈ ವ್ಯವಸ್ಥೆಗೆ. ಹದಿನಾರು ಮೈಲಿ ಪ್ರಯಾಣ, ಒಂದೇ ಒಂದು ಗಂಟೆಯಲ್ಲಿ ಮುಗಿಯುತ್ತೆ, ಪಂಚರ್ ಬರ್ಸ್ಟ ಯಾವುದೂ ಸಂಭವಿಸದೆ ಇದ್ದರೆ, ಅಂತ ಎಷ್ಟು ಹೇಳಿದರೂ, ಕೇಳಲಿಲ್ಲ ಕಡೆಗೆ, ಒಂದೊಂದಕ್ಕೂ ಒಂದೊಂದು ರೂಪಾಯಿ ಲಂಚ ತೆತ್ತು, ಬಾಯಿ ಮುಚ್ಚಿದೆವು. ಇನ್ನು ಉಳಿದದ್ದು, ಮೂರು. ಇಬ್ಬರು ತಾತಂದಿರು, ಬೃಹದ್ದೇಹಿಗಳು, ಆಮೇಲೆ ಆ ಹೆಣ್ಣುಮಗು, ಮುಂದಿನ ಸೀಟಿಗೆ ಪೋಲೀಸಿನವರೇ ಡ್ರೈವರ್ ಪಕ್ಕದಲ್ಲಿ 'ಇಬ್ಬರು ಕೂರಬಹುದು ಅಂತ ಲೈಸನ್ಸ್ ಕೊಡುವಾಗ, ಹೆಚ್ಚು ಅಂದರೆ, ಆ ಹೆಣ್ಣು ಕೂಸೊಂದೇ ತಾನೆ? ಪರವಾಗಿಲ್ಲ.

ಪುಣ್ಯಕ್ಕೆ ಬಾಗಿಲೂ ಹಾಕುವಂತಿರಲಿಲ್ಲ ಹುಡುಗಿಯನ್ನ ತೊಡೆಯ ಮೇಲೆ ಕೂರಿಸಿಕೊಂಡು, ಎಡಗೈಯಿಂದ ಬಾಗಿಲನ್ನು ಬಿಗಿಯಾಗಿ ಸೇರಿಸಿ ಹಿಡಿದರು, ಒಬ್ಬರು ವೃದ್ಧರು; ಇನ್ನೊಬ್ಬರು, ಗಿಯರ್‌ಕಡ್ಡಿಯ ಎಡಗಡೆ ಕೆಳಗಿರಿಸಿದ್ದ ಬ್ಯಾಟರಿಯ ಬಲಗಡೆ, ಉಸಿರನ್ನು ಮೇಲಕ್ಕೆತ್ತಿ ಹಿಡಿದು, ಎಲ್ಲ ಸರಿಹೋಯ್ತು, ಸ್ಟಾರ್ಟ್ ಮಾಡಯ್ಯ, ಎಂದು ಹೇಳಿದರು.

ಜನರ ಸಂದಿನಲ್ಲಿರಿಸಿದ್ದ ರೈಲು ತಂಬಿಗೆ, ತಿಂಡಿ ಡಬ್ಬ, ಹಣ್ಣಿನ ಗೂಡೆ, ಥರ್ಮಾಸ್ ಸೀಸೆ, ಇವುಗಳು ಗಡ ಗಡ ಸದ್ದುಮಾಡಿದವು. ಮೂರು ಕೂಸುಗಳೂ ಒಟ್ಟಿಗೆ ಕಿರಿಚಿದುವು. ಹುಡುಗರ ತಲೆಗೆ ಕಡ್ಡಿ ಬಡಿಯಿತು ತಾತನ ಎಡಗೈಯನ್ನು ತಟಾಯಿಸಿಕೊಂಡು ಬಾಗಿಲು ತೆರೆಯಿತು. ಪತಿಯ ಪಾದಸೇವೆ ಸಾಕಾಯಿತು. ಇಕ್ಕಟ್ಟಿನಲ್ಲಿ ಉಸಿರು ಕಟ್ಟಿದಂತಾಯಿತು. ನಾದಿನಿಗೆ ನಾಚಿಕೆ ಏರಿತು. ಚಿಕ್ಕಮ್ಮನ ಕೋಪ ಕಾವೇರಿತು.

ಸದ್ಯಕ್ಕೆ, ಮುಂದಿನ ಟೈರೊಂದು ಬರ್ಸ್ಟ್ ಆಯಿತು. ಎಲ್ಲರೂ ಇಳಿದು ಸುಖವಾಗಿ, ರಸ್ತೆಯ ಇಕ್ಕೆಲದಲ್ಲೂ ಆರಾಮವಾಗಿ ಕುಳಿತು, ಹರಟೆತೊಡಗಿದರು ಮತ್ತೆ ಟ್ಯಾಕ್ಸಿ ಹತ್ತಿ ಮನೆ ಸೇರಬೇಕಲ್ಲಾ ಅಂತ ಮರುಗಿದರು.

—ಶ್ರೀ ಬಿ. ನಾಗಪ್ಪ.

ಮೂಗರ್ಜಿ

ಓದು ಬರಹ ಕಲಿತ ಮಂದಿಯಿಂದ ದೇಶಕ್ಕೆ ಆಗುತ್ತಿರುವ ಮಹದುಪಕಾರಗಳಲ್ಲಿ ಅತೀ ಮುಖ್ಯವಾದದ್ದು, ಅವರು ಬರೆದು ರವಾನಿಸುವ ಮೂಗರ್ಜಿಗಳು.

ಮೂಗರ್ಜಿ ಬರೆಯುವವರನ್ನು ಹೇಡಿಗಳೆಂದು ಹಳಿಯುವ ಕೆಟ್ಟ ಚಾಳಿ ನಮ್ಮ ದೇಶದಲ್ಲಿ ಹರಡಿಬಿಟ್ಟಿದೆ. ಆದರೆ, ಹೆಸರಿಲ್ಲದೆಯೋ ಮುಚ್ಚು ಹೆಸರಿನಲ್ಲೋ ನೂರಾರು ಪತ್ರಗಳೂ ಲೇಖನಗಳೂ ದಿನವೂ ಪತ್ರಿಕೆಗಳಲ್ಲಿ ಬರುತ್ತಿಲ್ಲವೆ? ಪತ್ರಿಕೆಗಳಲ್ಲಿ ಅಗ್ರ ಲೇಖನಗಳನ್ನು ಬರೆಯುವವರು ಯಾರು? ಅನಾಮಧೇಯರು. ಅವುಗಳ ಕೆಳಗೆ ಬರೆದವರ ರುಜು ಇದೆಯೆ? ಒಬ್ಬ ಬಾತ್ಮಿದಾರ, ನೊಂದವ, ತಿಂದವ, ಹಿತಾಭಿಲಾಷಿ, ಮುಂತಾಗಿ ಹೇಳಿದರೆ, ಹೆಸರು ಕುಲ ಗೋತ್ರ ತಿಳಿಸಿದಂತಾಯಿತೆ?

ಆದ್ದರಿಂದ, ಮೂಗರ್ಜಿ ಬರೆಯುವವರು ಹೇಡಿಗಳಂತಲ್ಲ; ಅವರು ತಮ್ಮ ಹೆಸರನ್ನು ಮರೆಮಾಚುವುದು ಬೇರೆ ಕಾರಣಗಳಿಂದ. ಅವರು ನೂರಾರು 'ನೊಂದವ'ರ ಪ್ರತಿ ನಿಧಿಗಳು, ಅವರ ಲೇಖನಿ ಒಂದು ಜನಾಂಗದ ಸಂಯುಕ್ತ ಯಂತ್ರ. ಇತರರನ್ನುಳಿದು ಅವರಿಗೆ ವ್ಯಕ್ತಿತ್ವವಿಲ್ಲವೆಂಬ ತತ್ವವನ್ನು ಬಲ್ಲರು, ಅವರು. "ಬಳ್ಳಾರಿಯವ" "ಹುಬ್ಬಳ್ಳಿಯವ", "ರೈತ", "ಮಜದೂರ", "ಸಿನಿಮ ಪ್ರೇಮಿ", "ಪಧವೀಧರ" ಎಂದು ಮುಂತಾಗಿ ರುಜುಹಾಕಿ, ಆತ ತನ್ನನ್ನು ಇಡೀ ಗುಂಪಿನಲ್ಲಿ ಕರಗಿಸಲು ಸಿದ್ಧನಾಗಿದಾನೆ, ಆತ ನಿಜಕ್ಕೂ, ಕೀರ್ತಿಯನ್ನು ಬಯಸದ ತ್ಯಾಗಿ, ಹೆಸರಿಗಾಗಿ ಹೊಡೆದಾಡದ ಮಹಾತ್ಮ; ಎಲೆ ಮರೆಯ ಎಲೆ; ಆತನಿಗೆ ತನ್ನ ಸೇವೆ ಮುಖ್ಯವೇ ಹೊರತು, ತಾನು ಮುಂದು ಬರಬೇಕೆಂಬ ಬಯಕೆ ಇಲ್ಲ.

ಮೂಗರ್ಜಿಗಳನ್ನೆಲ್ಲ ಹರಿದು ಬಿಸಾಕಬೇಕೆಂಬ ಒಂದು ಕೂಗು ಎದ್ದಿದೆ, ಮೂಗರ್ಜಿಗಳಿಂದ ಅಪಾಯ ಒದಗಬಹುದೆಂಬ ಭೀತಿ ಇರುವವರಿಗೆ. ಆದರೆ, ಇದು ಶುದ್ಧ ತಪ್ಪು. ದ್ವೇಷಾಸೂಯೆಗಳಿಂದ ಅಧಿಕಾರಿಗಳ ಮೇಲೂ ಜನನಾಯಕರ ಮೇಲೂ ಸಂಘ ಸಂಸ್ಥೆಗಳ ಮೇಲೂ, ಮೂಗರ್ಜಿಗಳು ಉದ್ಭವಿಸುತ್ತವೆ, ಸರಿ! ಆದರೆ ಅಂಥವರ ವಿರೋಧ ಎಷ್ಟು ಮೂಗರ್ಜಿಗಳು ಬರುತ್ತವೋ, ಅವರ ಪರವಾಗಿಯೂ ಅಷ್ಟೇ ಅರ್ಜಿಗಳು ಬರುತ್ತವಾದ್ದರಿಂದ, ಅಲ್ಲಲ್ಲಿಗೆ ಸರಿಹೋಗುತ್ತವೆ. ಒಂದು ಬಗೆಯ ಅರ್ಜಿ

ಗಳಲ್ಲಿ ಕೆಟ್ಟ ಮಾತುಗಳೂ ಮತ್ತೊಂದರಲ್ಲಿ ಸ್ತೋತ್ರಗಳೂ ತುಂಬಿ, ಓದುವವರಿಗೆ ಅಸಹ್ಯವೆನಿಸುತ್ತದೆ.

ಆದರೆ, ಶೇಕಡ ೫ ರಷ್ಟು ಮೂಗರ್ಜಿಗಳಲ್ಲಾದರೂ, ನಿಜದ ಕಿಡಿ, ಸತ್ಯದ್ಧಗೆರೆ, ಇದ್ದೇ ಇರುತ್ತದೆ. ಬೆಂಕಿ ಇಲ್ಲದೆ ಹೊಗೆ ಇಲ್ಲವೆಂಬುದು ಶೇಕಡ ೫ ರಷ್ಟು ನಿಜ. ನೂರು ಜನ ಮೂಗರ್ಜಿ ಸಾಹಿತಿಗಳಲ್ಲಿ ಐದು ಜನವಾದರೂ, ದೇಶಾಭಿಮಾನಿಗಳಿರುತ್ತಾರೆ. ಗಂಜಿಯನ್ನು ಬಸಿಯುವಾಗ ನಾವು ಅನ್ನವನ್ನೂ ಚೆಲ್ಲಬಾರದು. ತೊಟ್ಟಿಲನ್ನು ಬಿಸಾಕುವಾಗ ಮಗುವನ್ನೂ ಎಸೆಯಬಾರದು.

ಅಲ್ಲದೆ, ಹೆಸರಿಲ್ಲದೆ ಬರುವ ಅರ್ಜಿಗಳನ್ನು ಹರಿದು ಬಿಸಾಕಿದರೆ, ಸುಳ್ಳು ಹೆಸರುವಿಳಾಸಗಳನ್ನು ಒಳಗೊಂಡ ಅರ್ಜಿಗಳು ಬರಲು ಪ್ರಾರಂಭವಾಗುತ್ತದೆ. ಆ ವಿಳಾಸಗಳನ್ನು ಹುಡುಕಿ ಹೆಸರುಗಳನ್ನು ಪತ್ತೆ ಹಚ್ಚಿ, ಕಡೆಗೆ ಅವು ಎಲ್ಲೂ ಇಲ್ಲ ಎಂದು ತಿಳಿದುಕೊಳ್ಳುವ ತ್ರಾಸಬೇರೆ. ಮೂಕರ್ಜಿ ಬರೆಯುವ ಸಮಾಜ ಸುಧಾರಕರನ್ನೂ ಗ್ರಾಮ ಸೇವಕರನ್ನೂ ಅಚ್ಚಕನ್ನಡ ಸಾಹಿತಿಗಳನ್ನೂ, ನಾವೇಕೆ ಸುಳ್ಳು ಹೆಸರುಕೊಡುವ ಅನ್ಯಾಯಕ್ಕೆ ನೂಕಬೇಕು?

ಭಾರಿ ಭಾರಿ ಅನ್ಯಾಯಗಳನ್ನೆಲ್ಲ ಒಂದು ಸಣ್ಣ ಮೂಗರ್ಜಿ ಹೊರಗೆಡಗಿದೆ; "ಸ್ವಾಮಿ! ನಾಳೆ ದಿವಸ ಬೆಳಗ್ಗೆ ಇಲ್ಲಿಂದ ಹೊರಡುವ ...ನಂಬರ್ ಕಾರನ್ನು ತಡೆದು ಹುಡುಕಿ, ದಯವಿಟ್ಟು!" ಎಂಬ ಮುನ್ನಚ್ಚರಿಕೆಯ ಮೂಗರ್ಜಿಗೆ ಮನ್ನಣೆ ಕೊಟ್ಟಿದ್ದರಿಂದ, ಲಕ್ಷಾಂತರ ರೂಪಾಯಿ ಚಿನ್ನ, ಅಫೀಮು, ಸಾರಾಯಿ, ಇತ್ಯಾದಿ ಪೋಲೀಸರಿಗೆ ಸಿಕ್ಕಿದೆ. ಭಾರಿ ಬಂಡೆಯೊಂದರ ಸಣ್ಣ ಬಿರುಕಿನಲ್ಲಿ ಪುಟ್ಟ ಗಿಡವೊಂದು ಹುಟ್ಟಿ ಪುಟಾಣಿ ಬೇರನ್ನಿಳಿಸಿ, ಇಡೀ ಬಂಡೆಯನ್ನು ಇಬ್ಭಾಗಮಾಡುವಂತೆ, ಎರಡಾಣೆ ಕವರಿನಲ್ಲಿನ ಎಡಗೈ ಬರಹವೊಂದು ಸಾವಿರ ರೂಪಾಯಿ ಸಂಬಳದವನ ಸಾವಿಗೆ ಉಪಾಯ ಹುಡುಕಿಸಿದೆ.

"ಲೆಟರ್ ರೈಟರ್" ಎಂಬ ಮಾದರೀ ಪತ್ರ ಸಂಗ್ರಹಗಳು ಅನೇಕ ಮಾರಾಟಕ್ಕೆ ಬಂದಿವೆ, ಪೇಟೆಗೆ. ಅವುಗಳನ್ನು ಅನೇಕರು ತರಿಸಿ ಇರಿಸಿಕೊಂಡು, ನಮುನಮೂನೆಯಾಗಿ ಪತ್ರಗಳನ್ನು ಬರೆದು, ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸಿದಾರೆ. ಮೂಗರ್ಜಿಗಳನ್ನು ಪ್ರೋತ್ಸಾಹಿಸುವುದರಿಂದ, ಪೋಲೀಸ್ ಇಲಾಖೆಗೂ, ಮುಖ್ಯವಾಗಿ ಲಂಚ ನಿರೋಧ ಶಾಖೆಗೂ, ಸಾಮಾನ್ಯವಾಗಿ ಎಲ್ಲ ಸಾರ್ವಜನಿಕ ಸಂಸ್ಥೆಗೂ ಉಪಕಾರವಾಗುವುದರಿಂದ, "ಮೂಗರ್ಜಿ ಮಾಡಲ್‌ಗಳು" ಎಂಬ ಒಂದು ಗ್ರಂಥವನ್ನು ಸರ್ಕಾರದವರೇ ರಚಿಸಿ, ಅಗ್ಗದ ಬೆಲೆಗೆ ಮಾರಿ, ಅಕ್ಷರ ಪ್ರಚಾರ ಸಮಿತಿಯ ಪಠ್ಯ ಪುಸ್ತಕವಾಗಿರಿಸಿದರೆ, ದೇಶದಾದ್ಯಂತ ಎಲ್ಲರಿಗೂ, ಅನುಕೂಲವಾಗುತ್ತದೆ; ಮೂಗರ್ಜಿಗಳಿಗೆ ಟಪಾಲ್ ಚೀಟಿ ಅಂಟಿಸಬೇಕಾಗಿಲ್ಲವೆಂದು

ಕಾನೂನು ಮಾಡಿದರೆ, ಇನ್ನೂ ಅನುಕೂಲ. ಕಂದಾಯಕ್ಕಾಗಿ ಸುಳ್ಳು ಲೆಕ್ಕ ಕೊಡುವವರು, ಕಂಟ್ರೋಲುಗಳನ್ನು ಮೀರುವವರು, ಕಳ್ಳಭಟ್ಟಿ ಇಳಿಸುವವರು, ಲಂಚಕ್ಕೆ ಕೈ ನೀಡುವವರು, ಕೈ ಎತ್ತುವವರು, ಓವರ್‌ಲೋಡಿನವರು ಅಂಡರ್ ಗ್ರೌಂಡಿನವರು, ಬೊಂಬಾಯಿ ಪ್ರಾಂತದ ಬಹು ಪತ್ನೀ ಸಂಪನ್ನರು, ಒಟ್ಟಿನಲ್ಲಿ ಕಾನೂನು ಮುರುಕರು, ಇವರ ಬೆನ್ನು ಹತ್ತಿದ ಭೇತಾಳಗಳಾಗಿ, ಇಡೀ ಜನತೆಯೇ ಕಣ್ಣಲ್ಲಿ ಎಣ್ಣೆ ಕೈಯಲ್ಲಿ ಲೇಖನಿ ಸಹಿತ, ಸೇವೆ ಸಲ್ಲಿಸಲು ಆಗ ಅವಕಾಶವಾಗುತ್ತದೆ.

ಪ್ರಜಾ ಪ್ರಭುತ್ವಯುಗದಲ್ಲಿ, ಪ್ರತಿ ಒಬ್ಬನೂ, ಪೋಲೀಸಿನವನೇ; ಪ್ರತಿ ಒಬ್ಬನೂ ಕಾನೂನು ಭಂಗಿಯೇ. ಆದ್ದರಿಂದ, ಇವನು ಅವನ ಮೇಲೂ ಅವನು ಇವನ ಮೇಲೂ ಸದಾ ಕಣ್ಣಿರಿಸಿರಬೇಕಾಗಿದೆ. ಇರಿಸಿ, ಅವನ ತಪ್ಪನ್ನು ಇವನೂ ಇವನ ತಪ್ಪನ್ನು ಅವನೂ, ಸಂಬಂಧಪಟ್ಟವರಿಗೆ ತಿಳಿಸಬೇಕಾಗಿದೆ.

ಅದನ್ನು ಹೇಗೆ ಸುಲಲಿತವಾಗಿ ಸ್ಫುಟವಾಗಿ ತಿಳಿಸುವುದು—ಎಂಬುದಕ್ಕೆ, "ಮೂಗರ್ಜಿ ಮಾಡಲ್ ಪುಸ್ತಕ" ಅತ್ಯಗತ್ಯ.

ಟಪಾಲ್ ರಿಯಾಯತಿಯೂ ತುಂಬ ಸಹಾಯಕ.

—ಮೂಗ.



ಕಡೆಗೂ ಲೆಕ್ಕದ ಮೇಡಂ ಮದುವೆ ಆದಳಂತಲ್ಲೇ! ಯಾರೆ? ವರ!!
ಇನ್ನಾರು! ತನಿಖೇಗೆ ಬಂದ ಇನ್ಸ್‌ಪೆಕ್ಟರು ತಾಳೀ ಕಟ್ಟೀ ಹೋದನಂತೆ.

ಪ್ರಾಣ ಹಿಂಡಿ

ದಿನವೂ, ಭಾನುವಾರವೂ ಬಿಡದೆ, ಸೋಮಯ್ಯ, ಏಳೂಮುಕ್ಕಾಲು ಗಂಟೆಗೆ ಸರಿಯಾಗಿ, ಠಾಕೊ ಠಾಕ್, ಗಡಿಯಾರದಂತೆ, ತನ್ನ ಹೊರಬಾಗಿಲು ತೆರೆದು, ಸರಸು ಕೈಯಿಂದ ಟಿಫಿನ್ ಕ್ಯಾರಿಯರ್ ಇಸುಕೊಂಡು, ಬೀದಿಗಿಳಿದು, ಕಾಲು ಮೈಲಿ ಆಚೆ ಇದ್ದ ಬಸ್ ಸ್ಟಾಂಡಿಗೆ ನಡೆದು ಬರುತ್ತಿದ್ದ—ಬಳೇಪೇಟೆಯ ತನ್ನ ಅಂಗಡಿಗೆ, ಗಲ್ಲಿ ಮಗ್ಗುಲಿಗೆ.

ಪತ್ರಿಕೆ ಅಂಗಡಿ, ಸಣ್ಣದು. ಅವನ ಪುಟ್ಟ ಸಂಸಾರವನ್ನು ಸಾಲವಿಲ್ಲದೆ ಸಾಗಿಸಿಕೊಂಡು ಹೋಗುವುದಕ್ಕೆ, ಸಾಕು. ಅವನಿಗಿದ್ದದ್ದು ಒಬ್ಬಳೇ ಹೆಂಡತಿ; ಅವಳೂ ಈಶ್ವರಾನುಗ್ರಹದಿಂದ, ಇದುವರೆಗೂ ಬಂಜೆ.

ಅಂಗಡಿಯೇ ಅವನ ಮಗು; ಕಾಮಧೇನು; ಕ್ಲಬ್ಬು; ದಿವಾನ್‌ಖಾನೆ; ಜನಾರ್ದನನ ಕಟ್ಟೆ ಅದನ್ನ ಪುಷ್ಕಳವಾಗಿ ಗುಡಿಸಿ ಅಲಂಕರಿಸಿ ಅಲ್ಲಿದ್ದ ದೇವರ ಪಟಕ್ಕೆ ಊದು ಕಡ್ಡಿ ಚುಚ್ಚಿ ಮಂಗಳಾರತಿ ಎತ್ತಿ ಹೂ ಮುಡಿಸಿ ಅಡ್ಡ ಬಿದ್ದು, ಅವನು ಅಲ್ಲೇ ನಗುನಗುತ್ತ ಕುಳಿತುಕೊಳ್ಳುತ್ತಿದ್ದ, ಆರೂವರೆಗೆ ನಂತರ, ಚಿಕ್ಕಲಾಲ್ ಬಾಗ್‌ನಲ್ಲಿ ಒಂದು ಗಳಿಗೆ ಕೂತು ಗಾಳಿ ಕುಡಿದು ಭಾಷಣ ಕೇಳಿ ಮೆಜಸ್ಟಿಕ್‌ನಿಂದ ಮತ್ತೆ ಏಳೂಮುಕ್ಕಾಲರ ಬಸ್ಸು, ಶ್ರೀರಾಮಪುರದ ಸೆರಗಿಗೆ, ಎಂಟೂವರೆಗೆ, ಸರಸೂ ಸರಸೂ ಅಂತ ಕೂಗಿ ಅವಳ ಕೈಗೆ ಟಿಫಿನ್ ಕ್ಯಾರಿಯರನ್ನು ಕೊಡುವನು.

ಇದು ಸೋಮಯ್ಯನ ದಿನಚರಿ.

ಸೋಮಯ್ಯ....ಬುದ್ಧಿವಂತ; ಕುಳ್ಳ. ಅಯ್ಯೋ! ಈಚಲ ಮರದ ಹಾಗೆ ಆಕಾಶ ಭೇದಿಸಿಕೊಂಡು ಬೆಳದರೇನು ಫಲ? ಕುಳ್ಳರಾಗಿ ಎಷ್ಟು ಮಹನೀಯರಿರಲಿಲ್ಲ? ಮುಖ್ಯ, ನಮ್ಮಿಂದ ಯಾರೂ ನೋವು ತಿನ್ನದೆ, ನಮಗೆ ಯಾರೂ ನೋವುಂಟುಮಾಡದೆ....

ಸೋಮಯ್ಯನ ವಿಷಯದಲ್ಲಿ, ಪಾಪ, ಈ ಭಾಗ್ಯ ಅವನಿಗಿಲ್ಲದೆ ಹೋಯಿತು. ಅವನಿಗೆ ಇಹಲೋಕದಲ್ಲಿದ್ದದ್ದು, ಒಬ್ಬನೇ ಶತ್ರು!

ಆ ಶತ್ರುವಿನೊಂದಿಗೆ ಅವನು ಮಾತನಾಡಿದ್ದೇ ಇಲ್ಲವೆನ್ನಬಹುದು. ನಾಲ್ಕು ವರ್ಷಗಳ ಹಿಂದೆ, ಅವನು ಮಲ್ಲೇಶ್ವರದಲ್ಲಿ ಬಾಡಿಗೆ ಮನೆ ಗೊತ್ತು ಮಾಡಿ, ಅಲ್ಲಿ ಸಂಸಾರ ಹೂಡಿದಾಗ, ಅವನ ಬಸ್‌ಸ್ಟಾಪಿನಲ್ಲಿ, ಅದೇ ಏಳೂಮುಕ್ಕಾಲ್ ಹೊತ್ತಿನ ಬಸ್ಸಿಗೆ, ಅಲ್ಲೇ ಆ ಶತ್ರು ಅವನಿಗೆ ಮೊತ್ತಮೊದಲು ಸಿಕ್ಕಿದ. ಬಸ್ ಬರುವ ತನಕ ಸೋಮಯ್ಯನನ್ನು ಆತ ಸಂಭಾಷಣೆಗೆ ಎಳೆಯುವನು. ಆತನ ಗಂಟಲೋ, ಕಹಳೆ; ಆಕಾರವೋ, ರಾಕ್ಷಸ, ಸೋಮಯ್ಯ ಪಾಪ, ಬವರಿಂಗ್‌ಪೇಟೆ ಆಚೆ, ತಿಪಟೂರಾಚೆ ಪ್ರಯಾಣಮಾಡಿಲ್ಲ. ಆದರೆ ಆತ ಬೊಂಬಾಯಿ ಕಲ್ಕತ್ತ ಹೃಷೀಕೇಶ ಎಲ್ಲದರ ನೀರನ್ನೂ ಕುಡಿದಿದಾನೆ. "ಏನು, ಸ್ವಾಮಿ ಎದ್ದಿರಾ!" ಎಂಬ ಆತನ ಸ್ವಾಗತ ಕೇಳಿದಾಗಲೇ, ಸೋಮಯ್ಯನಿಗೆ ಕೋಪ ಉಕ್ಕುವುದು. "ಬನ್ನಿ! ಬನ್ನಿ! ಇನ್ನೇನು ಬಂದು ಬಿಡುತ್ತದೆ ನಮ್ಮ ಬಸ್ಸು! ಚಳಿ, ಅಲ್ಲವೆ? ಬೊಂಬಾಯಲ್ಲಿ ಫೆಬ್ರವರಿ ತಿಂಗಳು ಕೊನೇವಾರದಲ್ಲಿ ಥೇಟ್ ಹೀಗೆಯೇ ಇರುತ್ತದೆ, ಚಳಿ" ಎಂದು ಆತ ದಿನಕ್ಕೊಂದು ರೀತಿಯಲ್ಲಿ ಹವಾಮಾನವನ್ನು ವಿವರಿಸುವಾಗ, ಸೋಮಯ್ಯ ಸಿಡಿ ಸಿಡಿ ಆಗುವನು.

ಆದರೆ, ವಿಧಿ ಇಲ್ಲ. ಹೊರಗೆ ನಗು, ಒಳಗೆ, ಕುದಿ.

ಬಸ್ ಹತ್ತಿ, ಸೋಮಯ್ಯ ಎಲ್ಲಿ ಕೂತರೂ, ಆತ ಪಕ್ಕದಲ್ಲೇ ಪ್ರತಿಷ್ಠಾಪನೆ ನಿಂತರೆ ಆತನೂ ಈತನ ಹಿಂದೆಯೇ ನಿಲುವು. ಜೋಡಿ ಸೀಟಿನಲ್ಲಿ ಒಂದೇ ಒಂದು ಖಾಲಿ ಇದ್ದು, ಅಲ್ಲಿ ಸೋಮಯ್ಯ ಕೂತರೆ, ಆತ, "ಸ್ವಾಮಿ! ಕೊಂಚ ಈಕಡೆ ಬರ್ತೀರಾ! ನೀವು....ಹಿ....ಹಿ .. ಹಿ....ಕೊಂಚ ಮಾತಾಡುವುದಿದೆ....ಅರ್ಜಂಟ್!" ಎಂದು ಅಂಗಲಾಚಿ, ಸೀಟ್ ಖಾಲಿಮಾಡಿಸಿ, ಬಹು ಆಪ್ತನಂತೆ, ಸೋಮಯ್ಯನ ದೋಸ್ತಿಯಂತೆ ಅವನ ಎಡಬಲ ವೊಂದರಲ್ಲಿ ಕೂತೇ ಬಿಡುವನು. ಕೂತು, ಕಿವಿ ತೂತು ಮಾಡಿಯೇ ಬಿಡುವನು.

"ಎಲಾ! ಚಂಡಾಲಾ! ಎಲ್ಲಿಂದ ವಕ್ರಿಸಿದೆ ನನ್ನ ಜಾತಕದಲ್ಲಿ?" ಎಂಬುದು ಕೊಂಕುಳಲ್ಲಿ. ಕೈಯಲ್ಲಿ ಮಾತ್ರ, ಛೆ! ಛೆ! ಬನ್ನಿ! ಬನ್ನಿ! ಕೂಡಿ! ಕೂಡಿ!" ಎಂಬ ಶರಣಾರ್ತಿ.

ಸೋಮಯ್ಯನದು ಸಣ್ಣಗಂಟಲು; ಓಡುವ ಬಸ್ಸಿನಲ್ಲಿ ಅವನ ಮಾತು ಪಕ್ಕದ ಕಿವಿಗೆ ತಾಕದು. ಆದ್ದರಿಂದ, ಅವನಿಗೆ ಬಸ್‌ನಲ್ಲಿ ಮಾತನಾಡುವುದೆಂದರಾಗದು. ಆದರೆ, ಆತ, ದಿನವೂ, ಅವನ ಪಕ್ಕದಲ್ಲಿ, ಅವನ ಕಿವಿಗೆ ತನ್ನ ಕಹಳೆಯನ್ನೊತ್ತಿ, ಏಕೀ ಕರಣ, ಸೇತುಬಂಧನ, ತಾಮ್ರಧ್ವಜ, ಗಣೀಭೂತ, ಯಾವಯಾವುದೋ ಕಗ್ಗವನ್ನು ಊದುವನು.

ಹಾಳಾದ್ದು, ಆತನ ಕಾರ್ಯಕ್ಷೇತ್ರವೂ ಬಳೇಪೇಟೆಯ ಗಲ್ಲಿಯೊಂದರಲ್ಲೇ-ಬಸ್ ಇಳಿದು, ನಡೆಯುತ್ತ ಮಲಬಾರ್ ಹೋಟಲ್‌ವರೆಗೆ ಆತನನ್ನು ಕೊಡಹು

ನಂತಿಲ್ಲ. ಅಲ್ಲಿ, "ಹೋಗ್ತೀರಾ! ಕಾಣೋಣ, ಸಂಜೆ, ಚಿಕ್ಕಲಾಲ್‌ಬಾಗ್‌ನಲ್ಲಿ! ನಿಮ್ಮ ಅಂಗಡಿಗೆ ಒಂದು ದಿನ ಬರ್ತೇನೆ! ನೀವು ತೋರಿಸಬೇಕಾಗಿಲ್ಲ, ನಾನೇ ಪತ್ತೆ ಹಚ್ಚುತ್ತೇನೆ" ಎಂದು ಹೇಳುತ್ತ, ದಿನವೂ ಆ ಕಿರಾತ, ಸೋಮಯ್ಯನ ಬೆನ್ನ ಮೇಲೆ ಒಂದು ಬಾರಿ ಬಲವಾಗಿ ಗುದ್ದುವನು.

ತಿರುಗಿಸಿ ಅವನ ಕೆನ್ನೆಗೆ ನಾಲ್ಕು ಬಾರಿಸಬೇಕು, ಎಂಬ ಆಸೆ ಸೋಮಯ್ಯನಿಗೆ ಆದರೆ....ಎಟುಕುವುದಿಲ್ಲ ಎಂಬುದು ಎರಡನೆಯಕಾರಣ; ಬಲಿಷ್ಠ ಎಂಬುದು ಮೊದ ಲನೆಯದು. ಮರ್ಯಾದೆ, ಮೂರನೆಯದು.

ಚಿಕ್ಕಲಾಲ್‌ಬಾಗ್ ಬೆಂಚಿನ ಮೇಲೆ ಕೂತು, ಹಾಳಾದವನಿಗೆ ಇವತ್ತು ಜ್ವರ ಹಿಡಿಯಬಾರದೆ, ಮೋಟಾರ್ ಸೈಕಲಿಗೆ ಸಿಕ್ಕಿ ಕಾಲು ಮುರಿಯಬಾರದೆ, ಎಂದು ಪ್ರಾರ್ಥಿಸುತ್ತಿರುವಾಗಲೇ, "ಬಂದಿರಾ! ಆಯಿತೆ ಅಂಗಡಿ ಕೆಲಸ"—ಕಹಳೆ ಕೂಗು! ಯಥಾಪ್ರಕಾರ, ಬಳ್ಳಾರಿ ಪ್ರಕರಣ, ಗೌರೀ ಶಂಕರಾರೋಹಣ, ಲೊಟ್ಟೆ, ಲೊಸ್ಕು.... ಥೂ! ಥೂ!....ಪರಮ ಶತ್ರು ಆಗದೆ ಇರುತ್ತಾನೆಯೆ, ಇಂಥವನು?

ತಿರುಗಿ, ಅವನ ಸಂಗಡ ಮೆಜೆಸ್ಟಿಕ್‌ನಿಂದ ಬಸ್ ಪ್ರಯಾಣ. ಉದ್ದಕ್ಕೂ, ಅವನ ನಾಲಿಗೆಯಿಂದ ನಾಗಾಲೋಟದ ಹರಟೆ!

ಅವನ ಹೆಸರು ಕುಲ ಗೋತ್ರ ಯಾವುದೂ ಸೋಮಯ್ಯನಿಗೆ ಗೊತ್ತಿಲ್ಲ; ಗೊತ್ತಾಗಬೇಕೆಂಬ ಆಸೆಯೂ ಇಲ್ಲ. ಅವನಿಲ್ಲದ ಜಗತ್ತಿನಲ್ಲಿ ಸುಖವಾಗಿ ಒಂದು ದಿವಸವಾದರೂ, ಬಾಳಬೇಕು, ಎಂಬುದೇ ಸೋಮಯ್ಯನ ಪ್ರಾರ್ಥನೆ.

ಅವನ ಉದ್ದೇಶ ಕೆಟ್ಟದ್ದಾಗಿರಲಿಲ್ಲ. ಅವನ ಸ್ವಭಾವವೇ ಅದು. ಜಿಗಣೆಯ ಹಾಗೆ ಅಂಟುವುದು, ಭೈರಿಗೆಯ ಹಾಗೆ ಕೊರೆಯುವುದು, ಕಿಲ ಕಿಲ ನಗುವುದು, ಕಂಠಪೂರ್ತಿ ಕೂಗೋದು, ದೋಸ್ತಿಗಳ ಬೆನ್ನಮೇಲೆ ಬಾರಿಸುವುದು—ಇದು ಅವನ ಹೀನ ಸುಳಿ; ಬೋಳಿಸಿದರೆ ಹೋದೀತೇ ಅದು?

ಹಾಯುವಾಗಿ ಅರ್ಧಗಂಟೆಯ ಹೊತ್ತು ಕಾಲುಚಾಚಿಕೊಂಡು ಮಲಗೋಣ ಎಂದು ನಾವು ಬಿದ್ದುಕೊಂಡರೆ, ಎಲ್ಲಿಂದಲೋ ಒಂದು ನೊಣ ಬಂದು, ನಮ್ಮ ಮೂಗಿನ ತುದಿಯನ್ನೇ ಹುಡುಕುತ್ತ, ಕಾಡಿ ಪೀಡಿಸುವಂತೆ, ಅವನು ಸೋಮಯ್ಯನ ಪ್ರಾಣವನ್ನು ಹಿಂಡಿದ.

ಸೋಮಯ್ಯ ಅವನ ಪ್ರಾಣವನ್ನು ಎಂದೋ ಒಂದು ದಿನ....ಹಿಂಡಿ ತೆಗೆದೇ ಬಿಡುತ್ತಾನೆ, ನೋಡುತ್ತಿರಿ ಪೇಪರುಗಳನ್ನ.

—ಸಾರಥಿ.

ಡಾರ್ವಿನ್ ದರ್ಶನ

ಡಾರ್ವಿನೇನು ಹೇಳಿದ? ಕಪಿಯ ಸಂತತಿ ಎಂತಲೆ?
ಸುಳ್ಳು! ಸುಳ್ಳು! ನಿಜವನರಿಯಲಿಲ್ಲ, ಪಾಪ, ಅವರು.

ಹಲ್ಲು ಕಿರಿಯುವಾಗ ನಾವು ಕಪಿಯ ಹೋಲಬಹುದು, ಸರಿ!
ಅದರೇನು? ಬರಿಯ ಕಪಿಯೆ ನಾವು? ಇಲ್ಲ, ಇಲ್ಲ.

ಹಸಿದು ಎಲೆಯ ಮುಂದೆ ಕೂತು, ಬಾಯ ಬಿಲದ ಮೂಲಕ
ಕಸವ ಭರ್ತಿಮಾಡುವಾಗ,....ತೋಳ .. ಅಲ್ಲವೆ?
ದ್ವೇಷವನ್ನ ಒಳಗೆ ಬೆಳೆಸಿ ಎಂದೊ ಹೇಗೊ ತೀರಿಸುವಾ
ಆನೆ; ನಾವು ಕೂಗದಿದ್ದರೆ ಸೂರ್ಯ ಮೂಡಲೊಲ್ಲ ಎಂಬ
ಕೋಳಿ; ಪವರು ದೊರೆಯೆ, ಚೇಳು; ಕಾಯ? ಹಂದಿ; ಜಂಬ? ನವಿಲು;
ಕರಡಿ, ಪೂಜೆ ವೇಳೆಗೆ; ಎರಡು ಜಿಹ್ವೆ ಇರುವ ಕೋಬ್ರ;
ಜಿಂಕೆ ಹಿಂಡಿನಂತೆ ಇರುವ ಮಂಕ ಸಂಕುಲದ ನಡುವೆ
ಸಿಂಹ; ಹೆದರಿಸಾಯ್ತು ಕುರಿ; ಗಾಣದೆತ್ತು; ಬಾಲಹೋದ
ನರಿಯು; ಎಂಜಿಲೆಂದರದಕೆ ಹಾರಿ ಸ್ವಂತ ಜಾತಿ ವೈರ ಬೆಳೆಸಿ
ಬೊಗಳಿ ಬಾಲ ಮುದುರುವಾ ನಾಯಿ; ಸಿಂಬ್ಳದಲ್ಲಿ ಬಿದ್ದ ನೊಣ;
ಬೆಲ್ಲವೆಂದರದನ್ನು ಮುತ್ತಿಕೊಂಬ ಇರುವೆ; ಕತ್ತೆ ಎಂದೇ
ಕರೆವರೆಮ್ಮನು ತಾಯಿ ತಂದೆ 'ಬಾಸ್ಸು' ಗುರುಗಳೆಲ್ಲ ಇಂದಿಗೂ;
ಕಣ್ಣು ತೆರೆದೇ ಹಾಲು ಕುಡಿವಾ ಬೆಕ್ಕು;....
ಸಾಲದೇ ನಿದರ್ಶನ? ಡಾರ್ವಿನ್ನನ ದರ್ಶನ
ಅರ್ಧ ಕುರುಡು, ಅರ್ಧ ಬರಡು,
ಸುಳ್ಳು, ಸುಳ್ಳು! ನಿಜಕೆ ದೂರ.

—ಪಾಟೀ.

"ಮೂಂಜ್"

ತರಕಾರಿ ತೆಗೆದುಕೊಂಡು ಬರೋಣ ಅಂತ ಶಿವು ಮಾರುಕಟ್ಟೆಗೆ ಹೋಗಿದ್ದ. ಅಲ್ಲಿದ್ದ ಬಟಾಣಿಕಾಯಿ ನೋಡಿ ನೀರೂರಿತು ಬಾಯಲ್ಲಿ. ಬೆಲೆ ಹೇಳಿದಾಗ ನಾಲಿಗೆ ಒಣಗಿ ಹೋಯ್ತು. ಲಭ್ಯವಿಲ್ಲ ಅಂತ ಹೊರಕ್ಕೆ ಬಂದ. ಅಷ್ಟು ಹೊತ್ತಿಗೆ ಮಳೆ ಬಂತು. "ಛಾವಣಿಕೆಳಗೆ ನಿಂತ, ಬಸ್ಸು ಬರುತ್ತೆ ಅಂತ ಆಶೆಯಾಗಿ. ಹೊಟ್ಟೇಲಿ ಏನೋ ಒಂದು ತರಹಾ ಸಂಕಟದ ಸುಳಿ ಕಾಣಿಸಿಕೊಂಡಿತು.

ಓಡಿ ಬಂದು ಅದೇ ನಿಲ್ದಾಣದಲ್ಲಿ ಡಾ|| ಶಾಮೂನೂ ನಿಂತುಕೊಂಡ. ಅವನೂ ಬಸ್ಸಿಗೆ ಕಾಯುತ್ತಿದ್ದ. ಶಿವೂನ ನೋಡಿ "ಏನು ಶಿವು ಚೆನ್ನಾಗಿದ್ದೀಯಾ! ಇನ್ನೊಂದು ಕಾಲು ಗಂಟೆ ಬಿಟ್ಟುಕೊಂಡು ಮಳೆ ಬಂದಿದ್ದರೆ ಎಷ್ಟು ಚೆನ್ನಾಗಿತ್ತು ಮನೆ ಸೇರಿಕೊಳ್ಳಬಹುದಾಗಿತ್ತು" ಎಂದ

"ಮಳೆ ಬರೋದು ಬಿಡೋದು ನಮ್ಮ ಕೈಲಿದೆಯೇ! ಅಂದ ಹಾಗೆ ಅಷ್ಟು ಮಳೆ ಬಂದರೂ ಬಟಾಣಿಕಾಯಿ ಬೆಲೆ ಹೆಚ್ಚಾಗುತ್ತಲೇ ಇದೆಯಲ್ಲಾ· ಆದರೆ, ಮಳೆ! ಬೆಳೆ ಆದರೆ, ಬೆಲೆಯೂ ಹೆಚ್ಚಾಗುತ್ತಲ್ಲಾ! ಈ ಕಲಿಗಾಲದಲ್ಲಿ" ಎಂದ ಶಿವು.

"ಬಟಾಣಿ ಕಾಳಿನಲ್ಲಿ ಇರೋ ಆಹಾರಾಂಶವೆಲ್ಲಾ ಹುಣಿಸೇ ಬೀಜದಲ್ಲೂ ಇದೆ. ಹುಣಿಸೇಬೀಜಾನ ಅಡಿಗೆ ಮಾಡಿ ಬಟಾಣಿ ರುಚಿ ಬರೋ ಹಾಗೆ ಮಾಡಿದ ಅಡುಗೂಲಜ್ಜೀಗೆ ಅಷ್ಟೈಶ್ವರ್ಯ ಕಾದಿದೆ" ಎಂದ ಶಾಮು.

"ಅಂದ ಹಾಗೆ ಶಾಮೂ! ಮಾರ್ಕೆಟ್ಟಿಗೆ ಬಂದಾಗಲೆಲ್ಲಾ ಈ ಮೇಲ್ ಹೊಟ್ಟೇಲಿ ಒಂದು ತರಹಾ ಸಂಕಟ ಆಗುತ್ತೆ. ಪಿತ್ತ ಸಂಕಟ ಅಂತ ಹೇಳೋ ಹಾಗಿಲ್ಲ. ವಾಕರಿಕೆ ಇಲ್ಲ. ಇದಕ್ಕೆ ಏನು ಮಾಡಬೇಕು" ಎಂದ ಶಿವು.

ಎರಡು ನಿಮಿಷ ಶಿವು ಮುಖವನ್ನೇ ದುರುಗುಟ್ಟಿಕೊಂಡುನೋಡಿದ ಶಾಮು. ಹೌದು. ಶಿವು. ಈ ಖಾಯಿಲೆ ಈಗೀಗ ಮಾರ್ಕೆಟ್ಟಿನಲ್ಲಿ ಹೆಚ್ಚಾಗುತ್ತಾ ಇದೆ. ಇದಕ್ಕೆ ಒಂದೇಶಾಸ್ತ್ರ. ದಿನಾಗಲೂ ಬೆಳಿಗ್ಗೆ ಎದ್ದಾಗ ಐದು ನಿಮಿಷ ದೇವರಧ್ಯಾನ ಮಾಡೋದು. ಪದಾರ್ಥಗಳ ಬೆಲೆ ಇಳಿಸಪ್ಪಾ ಅಂತ ಬೇಡಿಕೊಳ್ಳೋದು" ಎಂದ.

ಅಷ್ಟು ಹೊತ್ತಿಗೆ ಬಸ್ ಬಂತೂ ಇಬ್ಬರೂ ತಂತಮ್ಮ ದಾರಿ ಹಿಡಿದು ಹೊರಟು ಹೋದರು.

* * *

ಮಾರನೆಯ ದಿನ ಶಿವೂಗೆ ಒಂದು "ಬಿಲ್" ಬಂತು. ಡಾ|| ಶ್ಯಾಮರಾಯ ರಿಂದ. ನಿನ್ನೆ ಸಾಯಂಕಾಲ ನಿಮಗಿತ್ತ ವೈದ್ಯಕೀಯ ಸಲಹೆಗಾಗಿ ರೂಪಾಯಿ ಐದು ಫೀಜು. ಬೇಗ ಕಳಿಸಿಕೊಡಿ" ಎಂದು.

ಶಿವೂಗೆ ರೇಗಿಹೋಯ್ತು. ಅಲ್ಲಾ! ನನ್ನೇನು ಪರೀಕ್ಷೆಮಾಡಿದನೇ? ಬಸ್ ನಿಲ್ದಾಣವಲ್ಲಿ ನಿಂತಾಗ ಲೋಕಾಭಿರಾಮವಾಗಿ ಕೇಳಿದರೆ ಅದೇ ವೈದ್ಯಕೀಯ ಸಲ ಹೆಯೇ? ಅದಕ್ಕೆ ಫೀಜು ಬೇರೆ! ಹೀಗೇನೇನೋ ಈ ವೈದ್ಯರುಗಳೆಲ್ಲಾ ಜೀವನ ಮಾಡೋದು ಇವರಿಗೆ ಬುದ್ಧಿ ಕಲಿಸಲೇ ಬೇಕು. ಏನಾದರೂ ಉಪಾಯ ಹುಡುಕ ಬೇಕು" ಎಂದು ತಲೆಯೆಲ್ಲಾ ಯೋಚಿಸಿದ. ಅವತ್ತು ಊಟವೂ ಸೇರಲಿಲ್ಲ ಸಂಕ ಟವೂ ಹೆಚ್ಚಾಯ್ತು.

ಸಾಯಂಕಾಲ ಪೌರಸಭೆಯ ಉಚಿತ ವಾಚನಾಲಯಕ್ಕೆ ಹೋದ. ಪತ್ರಿಕೆಯ ಚಿತ್ರಗಳನ್ನಾದರೂ ನೋಡೋಣ ಎಂದು. ಅಲ್ಲಿಯೇ ಕೂತಿದ್ದ ಲಾಯರ್ ನೃಸಿಂಗ ರಾಯರು. ಒಳ್ಳೇ ಪಾಕಥಾ ಆಸಾಮಿ. ಅನುಭವಸ್ಥ ಲಾಯರು. ಕ್ರಾಸ್‌ವರ್ಡ್‌ನ್ನ ಏಕಾಗ್ರಚಿತ್ತತೆಯಿಂದ ಅಭ್ಯಾಸಮಾಡುತ್ತಿದ್ದ ಅರವತ್ತು ಮೀರಿದ ಅನುಭವೀ ಲಾಯರು. ಶಿವು ಅವರಿಗೆ ಹಿಂದಿನ ದಿನದ ಮಾರುಕಟ್ಟಿನ ಬಸ್ ನಿಲ್ದಾಣದ ಕತೆಯನ್ನೆಲ್ಲಾ ಹೇಳಿದ. "ಹೀಗೆ ಡಾ|| ಶಾಮರಾಯ ಮಾಡಬಹುದೇ" ಎಂದು ಮುಕ್ತಾಯ ಸೂಚಿಸಿದ.

ಲಾಯರ್ ನೃಸಿಂಗರಾಯರಿಗೆ ಕೃತಕ ಹಲ್ಲು. ಎರಡು ಮಾತಾಡಿದರೆ ಎರಡು ಹಲ್ಲು ಸಾಲೂ ಕಳಚಿಕೊಳ್ಳುತ್ತಿತ್ತು. ಅದನ್ನು ಎರಡು ನಿಮಿಷ ತಿರುಗಿ ಅಗಿದು ಸರಿಪಡಿಸಿಕೊಂಡು ಮಾತನಾಡಬೇಕು ಆತ.

ಹಾಗೆ ಮಾಡುತ್ತಲೇ ಆತ ಹೇಳಿದ. "ಹೌದೂ ಶಿವೂ! ನೀನು ಹೇಳುವುದು ನ್ಯಾಯವೇ? ನೀನು ರೇಗುವುದೂ ನ್ಯಾಯವೇ? ಆದರೆ ನ್ಯಾಯಾಸ್ಥಾನದ ದೃಷ್ಟಿ ಯಲ್ಲಿ ಇದು ಸರಿಯೇ! ಕಸಬುದಾರ ಎಲ್ಲೇ ಆಗಲೀ, ಹೇಗೆ ಆಗಲಿ, ತನ್ನ ವಿದ್ಯೆಯ ಅನುಭವದ ಪ್ರಯೋಜನವನ್ನು ನಿಮಗೆ ಕೊಟ್ಟರೂ, ಅವನು ಆ ಕಸುಬಿನ ಫೀಜಿಗೆ ಅರ್ಹ. ಅಂದಮೇಲೆ ಮುಂದೆ ಹೆಚ್ಚು ದುಃಖ ಅನುಭವಿಸದೇ ಇರಬೇಕಾ ದರೆ ಡಾ|| ಶಾಮರಾಯನಿಗೆ ಅವನ ಫೀಜನ್ನು ತಕ್ಷಣ ಕಳುಹಿಸಿ, ಅವನಿಂದ ರಶೀತಿ ಯನ್ನು ಪಡೆಯುವುದು ಒಳ್ಳೆಯದು. ನಿಮ್ಮ ಹಿತದೃಷ್ಟಿಯಿಂದ ಹೇಳುತ್ತೇನೆ" ಎಂದು.

ಶಿವು ಉಚಿತ ವಾಚನಾಲಯದಿಂದ ಹಾರಿಕೊಂಡೇ ಹೊರ ಹೊರಟ. ನೀತಿ ಹೇಳುಕ್ಕೆ ಆತನ್ನ ಕೇಳಿದರೆ ಆತ ಹೆಂಡತಿ ಬಿಟ್ಟು ಆರು ತಿಂಗಳಾಯ್ತು ಎಂದಹಾಗೆ, ಈ ನೃಸಿಂಗರಾಯನನ್ನು ಸಲಹೆ ಕೇಳಿದ್ದೇ ತಪ್ಪು. ನೃ ಎಲ್ಲಿಬಂತು. ಇದು ಬರೀ ಸಿಂಗ ಎಂದು ಮನಸ್ಸಿನಲ್ಲೇ ಅವನನ್ನು ಬಯ್ದಾಡಿದ.

ಮಾರನೆಯ ಬೆಳಿಗ್ಗೆ ಲಾಯರ ನೃಸಿಂಗ ರಾಯರಿಂದ ಒಂದು ಬಿಲ್ ಬಂತು ಶಿವೂಗೆ.

"ನಿನ್ನೆ ಸಾಯಂಕಾಲ ಪೌರಸಭೆಯ ಉಚಿತ ವಾಚನಾಲಯದಲ್ಲಿ ನೀವು ನನ್ನ ಲಾಯರ್ ಸಲಹೆ ಪಡೆದುದಕ್ಕಾಗಿ, ಇಂ. ಪೀ. ಕೋ. ಕಲಂ ೧೨೩ರ ಮೇರೆಗೆ, ನೀವು ನನ್ನ ಫೀಜಾದ ೫ ರೂಪಾಯನ್ನು ಈ 'ಬಿಲ್ಲು' ತರುವ ನನ್ನ ವಾರಸುದಾರನ ಮೂಲಕ ನನಗೆ ಕೂಡಲೇ ಕಳಿಸಿಕೊಡಿ. ಇಲ್ಲವಾದರೆ ನಿಮ್ಮ ಮೇಲೆ ಕಾನೂನು ರೀತ್ಯಾ ಮೊಕದ್ದಮೆ ಹೂಡಬೇಕಾಗುತ್ತದೆ" ಎಂದು.

ಶಿವೂಗೆ ಕೆಂಡಾ ಮಂಡಲ ಕೋಪ ಉಕ್ಕಿ ಹರಿಯಿತು.

"ಈ ಅರಳು ಮರಳು ವ್ಯಾಗಸಿಂಹ, ಗ್ರಾಮಸಿಂಹ, ಇವನನ್ನು ಮಾತನಾಡಿಸುವವರೇ ಇಲ್ಲ. ಇವನ ಹೆಂಡತಿ ಕೂಡ ಇವನ ಸಂಭಾಷಣೆ ಕೇಳಲಾರದೆ ಹರೋ ಹರ ಎಂದು ಎಂದೋ ಸತ್ತುಹೋದಳು. ಇವ ಈ ಮುದುಕ ನನಗೇನು ಲಾಯರ ಸಲಹೆ ಕೊಟ್ಟಿದ್ದು. ಕಾಸು ಪೀಕು ಎಂದು. ಅದಕ್ಕೆ ಇವನಿಗೂ ಕಾಸು ಪೀಕ ಬೇಕೆ? ನಾನೇನು ಬಕ್ರಾ ಅಂತ ತಿಳಿದುಕೊಂಡನೇ! ಇವನ ಸನ್ನದ್ದು ರದ್ದು ಮಾಡಿಸ್ತೀನಿ. ಇವನಿಗೆ ಗೊತ್ತಿಲ್ಲಾ! ನ್ಯಾಯಾಧೀಶರು ನಮ್ಮ ಸೋದರ ಸಂಬಂಧ ಅಂತ" ಎಂದೆಲ್ಲಾ ಮನಸ್ಸಿನಲ್ಲೇ ಹಾರಾಡಿದ, ರೇಗಾಡಿದ, ರಕ್ತದ ಒತ್ತಡವನ್ನು ಹೆಚ್ಚಿಸಿಕೊಂಡ.

* * *

ಅದರ ಮಾರನೆಯ ದಿನ ಬೆಳಿಗ್ಗೆ ಒಂದು ಬುಟ್ಟಿ ಮಾವಿನ ಹಣ್ಣು ಒಂದು ಕುಚ್ಚು ಹೂವು ತೆಗೆದುಕೊಂಡು ಶಿವು ತನ್ನ ಸೋದರ ಮಾವನ ಮಗಳ ಮನೆಗೆ ಹೋದ. ಅದನ್ನೆಲ್ಲಾ ಅವನ ಸೋದರಮಾವನ ಮಗಳಿಗೆ ಕೊಟ್ಟ. ಆಕೆ ಕತ್ತು ಕೊಂಕದೆ "ಶಿವೂ! ಮನೆಯಲ್ಲಿ ಎಲ್ಲಾ ಚೆನ್ನಾಗಿದ್ದಾರೆಯೇ? ಇದೇನು ಅಪರೂಪ ದರ್ಶನ. ಮಗಳಿಗೆ ಮದುವೆಯೇ? ಮಗನಿಗೆ ಮುಂಜಿಯೇ? ಮೊಮ್ಮಗನಿಗೆ ಚೌಲವೇ? ಇಲ್ಲಾ ನಿನ್ನ ಎಳೇ ಮಗುವಿಗೆ ನಾಮಕರಣವೇ? ಎಂದು ಕೇಳಿದಳು.

ಹದಿನಾರು ಮಕ್ಕಳ ತಂದೆ ಶಿವು. ಯಾವಾಗಲೂ ಇಷ್ಟು ಕುಸಿದಿತ್ತಿಲ್ಲ. ಈಗ ಕುಸಿದುಬಿದ್ದ. ಆ ಕುಸಿದುಬಿದ್ದ ಕಳೆ ಮುಖಕ್ಕೇರಿತು.

ಸೋದರ ಮಾವನ ಮಗಳು ಬಲು ಚೂಟಿ. ಇದನ್ನು ಕಂಡಳು. ತಾನಂದಿದ್ದು ತನಗೆ ಚೆನ್ನಾಗಿಯೂ ತಿಳಿದಿತ್ತು. ಅದಕ್ಕೆ ಸಮಾಧಾನ ಹೇಳುವುದು ಈಗ ಅಸಾಧ್ಯ ಎಂದೂ ಆಕೆಗೆ ಗೊತ್ತಿತ್ತು.

ಅದಕ್ಕೇ ಕಲಕಂಠ ನಿನಾದದಲ್ಲಿ ಕೂಗಿದಳು.

"ಅಲ್ಲಾ ! ಅಂದ್ರೆ. ನಮ್ಮ ಸೋದರತ್ತೆ ಮಗ ಶಿವು ಬಂದಿದಾನೆ ಅಪರೂಪಕ್ಕೆ ಏನು ಕೋರ್ಟು ಕೆಲಸವೋ ಇದ್ದೇ ಇರುತ್ತೆ ಬಂದು ಮಾತನಾಡಿಸಬಾರದೇ" ಎಂದು ಕೂಗಿದಳು.

"ಶಿವೂ! ಸ್ವಲ್ಪ ಅಡಿಗೆ ಮನೆಗೆ ಹೋಗಿ ಮೂರು ಬಟ್ಟಲು ಕಾಫೀ ಆರ್ಡರ್ ಮಾಡಿ ಬರುತ್ತೇನೆ ಎಂದು ಹೇಳಿ ಗಂಡ ಬಂದಕೂಡಲೇ ತಾನು ತಲೆ ಮರೆಸಿಕೊಂಡಳು ತನ್ನ ಕುಹಕದ ಅರಿವು ತನಗೆ ಸಾಕಷ್ಟು ಚೆನ್ನಾಗಿ ಕಂಡುದುದರಿಂದ.

ನ್ಯಾಯಮೂರ್ತಿಗಳು ಬಂದು ಕುಶಲ ಪ್ರಶ್ನೆ ಕೇಳಿದರು "ಶಿವೂ! ಚೆನ್ನಾಗಿದ್ದೀಯಾ! ಮನೆಯಲ್ಲಿ ಎಲ್ಲರೂ ಕ್ಷೇಮವೇ? ಮೊಮ್ಮಗು ಚೆನ್ನಾಗಿದ್ದಾನೆಯೇ? ಮರಿಮಗ ಸುಖವಾಗಿದ್ದಾನೆಯೇ? ನಿನಗೆ ಕನಕಾಭಿಷೇಕ ಮಾಡಿದ ಮುದ್ದು ಮಗು ಈ ಸಾರಿ ಹನ್ನೆರಡು ರೂಪಾಯಿ ಪರೀಕ್ಷೆಗೆ ಕೂತಿದೆ ಅಲ್ಲವೇ?"

ಇತ್ಯಾದಿ, ಇತ್ಯಾದಿ.

ಶಿವೂಗೆ ಕೋಪ ಏರಿದ್ದು ಸಹಜವೇ? ಆದರೂ ಕಾರ್ಯವಾಸಿ ಅಲ್ಲವೇ? ಸೋದರಮಾವನ ಮಗಳ ಗಂಡನ ಕಾಲನ್ನು ಹಿಡಿದ. ತನಗಾದ ಸೂಕ್ಷ್ಮ ಸಂತಾನ ಅಪವಾದವನ್ನು ನುಂಗಿಕೊಂಡ. ಯಾರಿಗೂ ತೋರದಂತೇ ನುಂಗಿಕೊಂಡ.

ಹಿಂದಿನ ದಿನ ಲಾಯರು ಗೃಧ್ರ ನೃಸಿಂಗರಾಯ ಹೇಳಿದ್ದನ್ನೆಲ್ಲಾ ಹೇಳಿದ. ಇಂತಹವರು ನ್ಯಾಯಾಂಗಕ್ಕೆ ನೆರಳು ಕೂಡ ಹಾಕಬಾರದೆಂದು ಹೇಳಿದ. ನೃಸಿಂಗರಾಯನ ಸನ್ನದ್ದು ರದ್ದಾಗಲೇ ಬೇಕಲ್ಲದೇ ಎಂದೂ ಹೇಳಿದ.

ನ್ಯಾಯ ಮೂರ್ತಿಗಳು ಮಂದಸ್ಮಿತ ವದನಾರವಿಂದರು. ತಮ್ಮ ಸಂಸಾರ ಸುಖಕ್ಕೆ ವೈಪ್ರೋಟೆ ಹೂಡಬಹುದಾಗಿದ್ದ ಶಿವುವನ್ನೂ ಈಕ್ಷಿಸಿದರು. ತಮ್ಮ ಸಂಸಾರ ತಾಪತ್ರಯವನ್ನು ಈತ ತಪ್ಪಿಸಬಹುದಾಗಿತ್ತಲ್ಲಾ! ಆದರೆ ಹಾಗೆ ಮಾಡಲಿಲ್ಲವಲ್ಲಾ ಎಂದೂ ಅಂದುಕೊಂಡರು.

"ಇದಕ್ಕೆ ಸರಿಯಾದ ಶಾಸ್ತಿಮಾಡಲೇ ಬೇಕು ಶಿವು. ಯಾರು ತಪ್ಪಿತಸ್ಥರೋ ಅವರು ಬಲಿಯಾಗಲೇ ಬೇಕು"

ಎಂದು ನ್ಯಾಯದ ತೀರ್ಮಾನವನ್ನು ಹೇಳಿದರು. ಹೇಳಿದರು ಏನು ಬಂತು? ಉದ್ಘೋಷಿದರು.

ಶಿವೂ ಮನಸ್ಸಿಗೆ ಶಾಂತಿ ಬಂತು. ಕೂಡಲೇ ಅಡಿಗೆ ಮನೆಯಿಂದ ಕಾಫಿಯೂ ಬಂತು.

* * *

ಎಲ್ಲರನ್ನೂ ಬೀಳ್ಕೊಟ್ಟು ಶಿವು ತನ್ನ ಮನೆಗೆ ಬಂದ.

ಮಾರನೆಯ ದಿನ ಪ್ರಮುಖ್ಯ ನಾಯಾಸ್ಥಾನದಿಂದ ಒಂದು ಕಾಗದ ಬಂತು. ಹದಿನಾರು ಮುದ್ರೆಯದು. "ಶ್ರೀ|| ಶಿವೂ ಅವರಿಗೆ. ನೀವು ನಮ್ಮ ನ್ಯಾಯಾಂಗದ ಪ್ರಮುಖ ಸೇವಕರೊಬ್ಬರಲ್ಲಿ ಹಿರಿಯರಾದ ಶ್ರೀ ನೃಸಿಂಗರಾಯರ ವಿಚಾರದಲ್ಲಿ, ಆತ ಸರಿಯಾಗಿ, ನ್ಯಾಯವಾದ ರೀತಿಯಲ್ಲಿ ವ್ಯವಹರಿಸಿದಾಗ್ಯೂ ಅಪವಾದಗಳನ್ನು ಆಡಿದ ಕಾರಣ ನಿಮ್ಮ ಮೇಲೆ, ನ್ಯಾಯಾಪವಾದ ಮಾಡಿದಕಾರಣ ಈ ಘನವಾದ ನ್ಯಾಯಾಲಯವು ಏಕೆ ಕಾರ್ಯಕ್ರಮ ಕೈಕೊಳ್ಳಬಾರದು" ಎಂದಿತ್ತು ಒಕ್ಕಣೆ.

ಶಿವೂಗೆ ಈ ಪತ್ರ ಓದಿದಾಗ ತಲೆಯೇ ತಿರುಗಿತು. ಹುಬ್ಬು ಹಾರ ತೊಡಗಿತು. ನಾಲಿಗೆ ತಿರುಗಿ ಒಣಗಿತು. ಸೂರಿನ ಮೇಲಿನ ಹಲ್ಲಿಯು ಲೊಚಗುಟ್ಟಿತು. ಜೇಡರ ಹುಳುವೊಂದು ಸೂರಿನಿಂದ ಕೆಳಗಿಳಿದುಬಿದ್ದು ಎಡಭುಜದ ಮೇಲೆ ಸವಾರಿಮಾಡಿತು. ದೂರದಲ್ಲಿ ಎರಡು ಬೆಕ್ಕುಗಳು ಚೀರಾಡ ತೊಡಗಿದುವು

ಆಗಲೇ ಅರ್ಥವಾಯಿತು ಶಿವೂಗೆ. ಅಪಶಕುನಗಳೆಲ್ಲಾ ಒಂದೇ ಮುಕ್ತಾಯ ಮಾಡುವುದು ಎಂದು.

ಶಿವು ತನ್ನ ಸೋಲನ್ನೊಪ್ಪಿಕೊಂಡ. ಮಾರನೆಯ ಬೆಳಿಗ್ಗೆ. ಡಾ|| ಶಾಮರಾಯನಿಗೆ ಐದು ರೂಪಾಯಿಗಳನ್ನು ಮನಿ ಆರ್ಡರ್‌ಮಾಡಿದ. ಲಾಯರ್ ನೃಸಿಂಗರಾಯರಿಗೆ ಐದು ರೂಪಾಯಿ ಫೀಜು ಕಳಿಸಿದ, ಮನಿಯಾರ್ಡರ್‌ಮೂಲಕ. ಪ್ರಮುಖ ನ್ಯಾಯಾಸ್ಥಾನಕ್ಕೆ ಕ್ಷಮಾಪಣೆ ಪತ್ರ ಸಲ್ಲಿಸಿದ, ಯಾವ ಅಡಚಣೆಗಳೂ, ನಿರ್ಭಂಧಗಳೂ ಇಲ್ಲದಂತೆ.

* * *

ಸಂಕಟ! ಈಗ ಶಿವೂಗೆ. ಏನೋ ಒಂದು ತರಹ ಸಂಕಟ. ಪಿತ್ತ ಸಂಕಟವಲ್ಲಾ! ವಾಕರಿಕೆ ಇಲ್ಲ. ಮೇಲು ಹೊಟ್ಟೆಯಲ್ಲಿ ಏನೋ ತಳಮಳ. ಇದಕ್ಕೇ "ಮೂಂಜ್" ಅಂತ ಕರಾಚಿಯಿಂದ ಹಿಂತಿರುಗಿದ ನಮ್ಮ ಬಾಂಧವ ಸಿಂಧಿಗಳು ಹೇಳುವುದು.

"ಅಕ್ಕಿಯೋ ನಂಟರೋ?"
ಅಥವ
"ಭಾಷಾವಾರು ಪ್ರಾಂತಗಳು"

ಲೇಕಖರು :—ಬಾಲಕ ಶಶಿಧರ.

ನಮ್ಮ ಪಾಠಶಾಲೆಯ ಕೆಲವು ಮಂದಿ ಬಾಲಕರು ಸೇರಿಕೊಂಡು ಒಂದು ಚರ್ಚಾಕೂಟವನ್ನು ಮಾಡಿಕೊಂಡಿದ್ದೇವೆ. ಈ ರೀತಿಯ ಕೂಟವನ್ನು ಮಾಡಿಕೊಂಡು, ಅದರ ಸದಸ್ಯರುಗಳಾದ ಬಾಲಕರಾದ ನಾವು, ಈ ವಿಷ್ಯಕ್ಕೆ ಸಂಭಂದಪಟ್ಟ ವಿಚಾರಗಳನ್ನು ಗಹನವಾಗಿ ಚರ್ಚಿಸಿ, ಮುಂದಿನ ಜನಾಂಗವಾಗುವ ನಮ್ಮ ವಾಕ್ಷಕ್ತಿಯನ್ನೂ ಜ್ನ್ಯಾನವನ್ನೂ ವಿಪರೀತ ಮಾಡಿಕೊಳ್ಳಬೇಕೆಂಬ ಆಶೆ ನನಗೆ ಬಹಳ ದಿನಗಳಿಂದಲೂ ಇತ್ತು. ಹಾಗೇ ಮಾಡಬೇಕೆಂದಿದ್ದೆ. ಆದರೆ ನಾನು ಇನ್ನೂ ಯೋಚನಾಮಗ್ನನಾಗಿರುವಾಗಲೆ ನನ್ನ ಪರಮ ಮಿತ್ರನಾದ ರಾಮು ಇತರರೊಡನೆ ಮಾತಾಡಿ ಕೂಟವನ್ನು ಏರ್ಪಡಿಸಿದ. ಆದರೂ, ವಾಚಕ ಮಹಾಷಯ, ಅದನ್ನು ಮೊದಲು ಯೋಚಿಸಿದವನು ನಾನೇ ಎಂದರೆ ಅಸಂಭದ್ದ ಪ್ರಲಾಪವಾಗಲಾರದು.

ನಮ್ಮ ಕೂಟದಲ್ಲಿ ಹದಿನಾಲಕ್ಕು ಸದಸ್ಯರಿದ್ದಾರೆ. ಅದಕ್ಕೆ ಒಂದು ಕಟ್ಟುನಿಟ್ಟಾದ ಕಾನ್ಸ್ಟಿಟೆಯೂಷನ್ ಇದೆ. ನಮಗೋಸ್ಕರ ಕೂಟವಾದ್ದರಿಂದ ನಮಗೆ ಬೇಕಾದಾಗ ಬೇಕಾದ ಮಾಪ್ರಾಡುಗಳನ್ನು ಮಾಡಿಕೊಳ್ಳುತ್ತೇವೆ. ಇದು ಪ್ರಜಾಸತ್ತ ರಾಜ್ಯದ ಕಾಲ, ಆದರೆ democrasy ಯಾದ್ದರಿಂದ ಎಲ್ಲರಿಗೂ ಸಮಾನ ಅವಕಾಷವಿರಬೇಕು. ಆದ್ದರಿಂದ ನಾವು ಒಂದೊಂದು ತಿಂಗಳಿಗೆ ಒಬ್ಬೊಬ್ಬ ಅಧ್ಯಕ್ಷನೂ, ಕಾರ್ಯದರ್ಷಿಯೂ, ಕಜಾಂಚಿಯೂ ಇರಬೇಕೆಂದು ಠರಾವು ಮಾಡಿದ್ದೇವೆ. ಚಂದಾ ತಿಂಗಳಿಗೆ ನಾಲಕ್ಕು ಆಣೆಗಳು ಮಾತ್ರ. ಉಪಾಹಾರಕ್ಕೆ ತಲೆಗೆ ನಾಲಕ್ಕು ಆಣೆಗಿಂತ ಹೆಚ್ಚು ಖರ್ಚಾಗಕೂಡದೆಂದು ಕಜಾಂಚಿಗಳು ಸಮಯ ಬಂದಾಗಲೆಲ್ಲ ಆಡಿಟ್ ನೋಟ್ ಹಾಕುತ್ತಾರೆ. ನನಗಿನ್ನೂ ಕಜಾಂಚಿಯ ಸರದಿ ಬಂದಿಲ್ಲ. ಹೀಗೆ ನಿಯಮಗಳನ್ನು ಮಾಡಿಕೊಂಡು ಅದರಂತೆ ಅಕ್ಷರತಹ ನಡೆಯುತ್ತಿದ್ದೇವಿ. ಯಾಕೆಂದರೆ ಬಾಲಕರಾದ ನಮ್ಮಲ್ಲಿ ಏನೇ ಬರಲಿ ಶಿಸ್ತು ಒಗ್ಗಟ್ಟು ಇರಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ!

ಕೆಲವು ದಿನಗಳ ಹಿಂದೆ ಶ್ರೀಮರ್ಾ ಶಾಹುರಾಯರ (ವಾಚಕ ಮಹಾಷಯು, ಇನ್ನು ಮುಂದೆ ಈ ಮಹನೀಯರನ್ನು ಶಾಮಿ ಎಂಬ ನಾಮಧೇಯದಿಂದ ಕರೆಯಲ್ಪಡುತ್ತೆ) ಆದ್ಯಕ್ಷತೆಯಲ್ಲಿ ಘನವಾದ ಕಚೇರಿಯೊಂದು ನಡೆಯಿತು. ಸಭೆಯ ಮುಂದೆ ಚರ್ಚೆಗೆ ಇದ್ದ ವಿಷಯ ಇದು :—"ನಮ್ಮ ಪವಿತ್ರವಾದ ಭರತ ಖಂಡಕ್ಕೆ ಒದಗಿರುವ ಸ್ವಾತಂರ್ತ್ಯದ ನವ ತರುಣದಲ್ಲಿ ಭಾಶಾವಾರು ಪ್ರಾಂತಗಳನ್ನು ನಿರ್ಮಿಸತಕ್ಕದ್ದು ಮತ್ತು ಹರಿದು ಹಂಚಿಹೋಗಿರುವ ಕನ್ನದನಾಡನ್ನು ಏಕೀಕರಿಸಿ ಒಂದೇ ರಾಷ್ಟ್ರವನ್ನು ರಚಿಸತಕ್ಕದ್ದು." ವಾಚಕ ಮಹಾಷಯು, ಚರ್ಚೆಯ ಒಂದು ವಿಹಂಗಮ ನೋಟವೊಂದನ್ನು ಈ ಕೆಳಗೆ ತಮ್ಮ ಕ್ರುಪಾಕಟಾಕ್ಷಕ್ಕೆ ನಮೂದಿಸಲ್ಪಟ್ಟಿದೆ.

ವಿಷಯುದ ಪರವಾಗಿ ಮುಖ್ಯ ಭಾಶಣಕಾರರು, ಶ್ರೀ ಶಂಕರು :—ಅಧ್ಯಕ್ಷರೆ, ಮಹನೀಯರೆ ಮತ್ತು ಗೆಳೆಯರೆ.......

ಶ್ರೀ ಸುಬ್ಬು :—ಅಧ್ಯಕ್ಷರೆ, ಒಂದು ಪಾಯಿಂಟ್ ಆಫ್ ಆರ್ಡರ್. ಭಾಷಣಕಾರರು ಹೀಗೆ ಸಭೆಯನ್ನುದ್ದೇಶಿಸಬಹುದೆ?

ಶ್ರೀ ರಂಗಣ್ಣ :— ಅದು ಆರ್ಡ್ರರ್ ಅಲ್ಲ, ಇಂಫರ್ಮೇಷನ್.

ಶ್ರೀ ಸುಬ್ಬು :—ಆರ್ಡ್ರರ್.

ಅಧ್ಯಕ್ಷರು :—ಅದು ಏನಾದರೂ ಆಗಲಿ, ಅದೊಂದು ಪಾಯಿಂಟು. ಭಾಷಣಕಾರರು ಅಧ್ಯಕ್ಷರನ್ನು ಮಾತ್ರ ಸಂಭೋದಿಸಬೇಕು.

ಹೀಗೆ ಬಿಸಿ ಬಿಸಿ ಚರ್ಚೆಯಾಗಿ, ಕಡೆಗೆ ಶ್ರೀ ಶಂಕರು ತಾನು ಅಧ್ಯಕ್ಷರನ್ನು ಬಯ್ಯಲಿಲ್ಲವೆಂದೂ ಅವರು ಕಳಿತಿದ್ದ ಕುರ್ಚಿಯನ್ನು ಒಯ್ದನೆಂದೂ ಹೇಳಿದಮೇಲೆ ಸಭೆ ಷಾಂತವಾಯಿತು. ಆದಕ್ಕೆ ಮುಂಚೆ, ಭಾಷಣಕಾರರು ಹೇಗೆ ಬೇಕಾದರೂ ಮಾತಾಡಬಹುದೆಂದು ಅಧ್ಯಕ್ಷರು ರೂಲಿಂಗ್ ಕೊಟ್ಟರು.

ಶ್ರೀ ಶಂಕರು (ಮುಂದುವರಿಸಿದುದು) :— ಇದು democrasy ಯ ಕಾಲ ಕನ್ನಡನಾಡು ಭಾರತಮಾತೆಯ ಕಿರೀಟಪ್ರಾಯವಾಗಿದೆ. ನಮ್ಮಲ್ಲಿ ಲೋಭ ಖನಿಜಗಳ ಸಂಪತ್ತಿದೆ. ತುಂಗಭದ್ರೆ ಕಾವೇರಿಯರೇ ಮೊದಲಾದ ಪುಣ್ಯಥೀರ್ಥಗಳಿವೆ. ಆದ್ದರಿಂದ ಕೂಡಲೆ ಕರ್ಣಾಟಕ ರಾಷ್ಟ್ರವನ್ನು ರಚಿಸಬೇಕು. ಇಲ್ಲಧಿದ್ದರೆ ಕನ್ನಡಮ್ಮನಿಗೆ ಮೋಸಮಾಡಿದಹಾಗಾಗುತ್ತದೆ.

ಶ್ರೀ ರಂಗಣ್ಣ (ಅನುಮೋದಕರು) :— ಕರ್ಣಾಟಕವನ್ನು ಒಂದುಮಾಡುವುದರಿಂದ ಜನರೆಲ್ಲ ಒಂದಾಗುತ್ತಾರೆ. ಪ್ರಪಂಚದ ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತ ದೇಶ ಒಗ್ಗಟ್ಟಾಗಿರಬೇಕು. ಪೂರ್ವದಲ್ಲಿ ವಿಜಯನಗರ ಇತ್ತಿಲ್ಲವೆ! ಕರ್ಣಾಟಕ

ಪ್ರಾಂತವಾದರೆ ಎಲ್ಲರಲ್ಲೂ, ಹಿರಿಯರಲ್ಲೂ ಗಂಡಸರಲ್ಲೂ ಸಹ, ಒಗ್ಗಟ್ಟು ಬರುತ್ತದೆ; ಕಡೆಯುಪಕ್ಷ ಬರಬೇಕು. ಅಲ್ಲದೆ, ಕೋಲಾರದ ಚಿನ್ನದ ಜತೆಗೆ ಗೋಲ್ಕೊಂಡದ ವಜ್ರ ವೈಡೂರ್ಯವೂ ಧಾರವಾಡದ ಹತ್ತಿಯೂ ಸೇರಿ, ಕರ್ಣಾಟಕ ಧನಕನಿಕರ ರಾಷ್ಟ್ರವಾಗುತ್ತದೆ. ಕನ್ನಂಬಾಡಿಯ ಜತೆಗೆ ತುಂಗಭದ್ರಾ ಜಲಾಶಯವೂ ಸೇರಿ, ನೀರಿನ ಸರಬರಾಜು ಹೆಚ್ಚಾಗಿ, ರೈತರೂ ಹೆಚ್ಚಿಕೊಂಡು, ನಾವೆಲ್ಲ ಸುಖವಾಗಿರುತ್ತೇವೆ.

ಶ್ರೀ ಸುಬ್ಬು (ಪ್ರಧಾನ ವಿರೋಧಕ):—ಕರ್ಣಾಟಕವನ್ನು ಏಕೀಕರಿಸುವುದು ಭಾರೀ ತಪ್ಪು. ಮಲೆಯಾಳಿಯನ್ನು ಕೇಳಿ ನಮಗೆ ಹೇಗೆ ಹಾಸ್ಯವೋ, ಹಾಗೆ ಧಾರವಾಡದ ಕನ್ನಡ ಕೊಯಮುತ್ತೂರಿನವರಿಗೆ ಹಾಸ್ಯ, ಮಂಗಳೂರಿನ ಮಾತು ನಮಗೆ ಹಾಸ್ಯ. ಇನ್ನೊಬ್ಬರು ನಕ್ಕಾಗ ನಮಗೆ ಕೋಪ ಬರುವುದು ಸಹಜ. ಒಂದೇ ಮನೆಯವರು ನಕ್ಕು ಜಗಳವಾಡಬಾರದು. ಪಕ್ಕದ ಮನೆಯವರು ಅವರ ಮನೆಯಲ್ಲಿ ನಕ್ಕರೆ ನಮಗೆ ಕೇಳುವುದಿಲ್ಲ, ಜಗಳವಾಗುವುದಿಲ್ಲ. ಆದ್ದರಿಂದ ಧಾರವಾಡ, ಮಂಗಳೂರು, ಮೈಸೂರು ಇವೆಲ್ಲ ನೆರೆಮನೆಗಳಾಗಿದ್ದರೆ ಲೇಸು. ಅಲ್ಲದೆ ನೂರಾರು ವರ್ಶಗಳಿಂದ ಈ ರಾಷ್ಟ್ರಗಳು ಬೇರೆ ಬೇರೆಯಾಗಿದ್ದು ಅದೇ ಒಗ್ಗಿ ಹೋಗಿದೆ. ಸ್ಟಾಲಿನ್ ಹೇಳಿದಹಾಗೆ, Let sleeping dogs lie.

ಶ್ರೀ ಕಿಟ್ಟು (ವಿರೋಧಕರ ಅನುಮೋದಕರು):—ಮನೆಯಲ್ಲಿ ಹೆಂಗಸರು ಆಡುವ ಮಾತೇ ಮಾತೃಭಾಷೆ. ಕೊಯಮುತ್ತೂರು, ಧಾರವಾಡ, ಇತ್ಯಾದಿಯ ಕನ್ನಡಗಳಿಗೆ ಬಹಳ ವೆತ್ಯಾಸವಿದೆ. ತಮಿಳಿಗೂ ಕನ್ನಡಕ್ಕೂ ಬಹಳ ಹೋಲಿಕೆ ಇದ್ದರೂ ಅವು ಬೇರೆ ಬೇರೆ ಭಾಶೆಗಳಾಗಲಿಲ್ಲವೆ? ಹಾಗೇ ಇವುಗಳನ್ನೂ ಬೇರೆ ಭಾಶೆಗಳೆಂದು ಕರೆಯಬೇಕು. ಆಯಾ ಪ್ರಾಂತದ ಭಾಶೆ ಹೇಗೆ ಬೇಕೋ ಹಾಗೆ ಬೆಳೆಯುವುದು ಅಲ್ಲಿಯ ಜನರ fundamental right. ಆದ್ದರಿಂದ ಆಯಾ ಪ್ರಾಂತಗಳನ್ನು ಬೇರೆ ಬೇರೆ ರಾಷ್ಟ್ರಗಳನ್ನಾಗಿ ಮಾಡುವುದು ಒಳ್ಳೆಯದು. ಇದರಿಂದ ಇನ್ನೊಂದು ಉಪಯೋಗವೇನೆಂದರೆ, ಹೆಚ್ಚು ಶಾಲೆಗಳನ್ನು, ವಿಶ್ವವಿದ್ಯಾಲಯಗಳನ್ನೂ ತೆಗೆಯಬಹುದು. ಹೆಚ್ಚು ಜನರಿಗೆ ದೊಡ್ಡ ಹುದ್ದೆಗಳು ಸಿಗುತ್ತವೆ. ಹೆಚ್ಚು ಜನಗಳು ಪ್ರಜಾಪ್ರತಿನಿಧಿಗಳಾಗಿ ರಾಜ್ಯಭಾರ ನಡೆಸಿ, ದೇಶವೂ ತಾವೂ ಪ್ರಜೆಗಳೂ ಎಲ್ಲರೂ ಸುಖವಾಗಿರಬಹುದು. ಸಣ್ಣ ಸಣ್ಣ ಯೂನಿಟ್‌ಗಳಾಗಿರುವುದರಿಂದ ಎಲ್ಲರಲ್ಲೂ ನಮ್ಮವರು ತಮ್ಮವರು ಎಂಬ ಸದ್ಭಾವನೆ ಮೂಡಿ, ಪರಸ್ಪರ ಸಹಾಯವೂ ಕೊಟ್ಟುಕೊಳ್ಳುವುದೂ ಬೆಳೆದು ಎಲ್ಲರೂ ಸುಖವಾಗಿರುತ್ತಾರೆ.

ಇದೇ ರೀತಿಯಾಗಿ ಇನ್ನೂ ಕೆಲವರು ಸಭೆಯನ್ನುದ್ದೇಶಿಸಿ ಮಾತಾಡುತ್ತಿದ್ದಾಗ ಸಭೆ ಉಪಾಹಾರಕ್ಕೆ ಎದ್ದಿತು.

ಕಾರ್ಯದರ್ಶಿ (ಬಾಲಕ ಶಶಿಧರ)ಯವರ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ನವೀನ ಗಾದೆಗಳು

"ಭಾಷಾ WAR ಉ"

ಎಲ್ಲ ಪ್ರಾಂತ್ಯದ ಆಸೆಯೂ "ಭೂತು"

* * *

ಅವಸಾನಕ್ಕೆ ಹೆದರಿ ಅಜ್ಜ "ಆಗಲಿ" ಎಂದ.

* * *

ಊರಮೇಲೆ ಊರು ಹೋದರೆ
ಮಿಶ್ರನಿಗೇನು ವಾಂಚೂಗೇನು?

* * *

ತಮಿಳಿಗಿಂತ ತೆಲುಗು ಭಾರ.

* * *

ಅಧ್ಯಕ್ಷರು ಒಡೆದ ಪ್ರಾಂತ್ಯಕ್ಕೆ ಬೆಲೆಯೇ ಇಲ್ಲ.

* * *

ಸ್ವಲ್ಪದರಲ್ಲಿ ರಾಜ್ಯ ಬಂದರೆ
ಬಳಪದಲ್ಲೇ ಷಹರು ಕಟ್ಟಿದರಂತೆ.

* * *

ಆಂಧ್ರರಿಗೆ ಸ್ವರಾಜ್ಯ ಬಂದರೆ—
ಕೇಂದ್ರದವರು ಹಬ್ಬಮಾಡಿದರಂತೆ.

* * *

ಸಾಯೋನಿಗೆ ರಾಜ್ಯ ಬಂದರೆ
ಸಾಗಿಸೋದು ತಪ್ಪೀತೆ?

* * *

ಬಿಂಕದಲ್ಲಿ ನೀಲಗಿರಿ, ಕೈಯಲ್ಲಿ ಬಳ್ಳಾರಿ.

* * *

ತರಲೆಮಾಡಿ ಪ್ರಾಂತ್ಯ ಎಂದರೆ
ತರಳೆಯರೆಲ್ಲಾ ತಾರೆಲೆ ಕೇರಳಾ" ಎಂದಂದರಂತೆ.

* * *

ತಿಳಿದುಕೊಂಡವರು ಪ್ರಾಂತ್ಯ ಬೇಕು ಎಂದರೆ
ಕಳೆದುಕೊಂಡವರು ಬೊಟ್ಟೆ ಇಟ್ಟರಂತೆ.

ಉರಿಗಾಳು

ವೈಶಾಖ ಶುದ್ಧ ಪೌರ್ಣಮಿ ಬಲು ಶುಭವಾದ ದಿನ. ಅಂದೇ ಬುದ್ಧ ಜಯಂತಿ. ಅಂದೇ ನವಮ್ಯಾಕೆ ಹುಟ್ಟಿದ ಹಬ್ಬ ಎಂದು ಭಾಷಣಕಾರರೊಬ್ಬರು ಸವಿನಯದಿಂದ ಬಿನ್ನವಿಸಿದರಂತೆ.

*　　*　　*

ಈ ಸಾರಿ ಮಾವಿನ ಫಸಲು ಬಲು ಕಡಿಮೆಯಂತೆ.

—ಕಾರಣ ತಿಳಿದೇ ಇದೆಯಲ್ಲ—ಆಟಂಬಾಂಬು ; ಕಾಂಗ್ರೆಸ್ ಸರ್ಕಾರ; ಕಾರ್ಮಿಕ ಹಾವಳಿ, ಇತ್ಯಾದಿ.

*　　*　　*

ನೂತನ ಮಾದರಿಯ ಹೋಟಲೊಂದರಲ್ಲಿ ಬಲು ಅಂದವಾದ ರೋಜಾ ಗಿಡಗಳನ್ನು ಇಟ್ಟಿದ್ದಾರಂತೆ.

—ರೋಜಾಗಿಡಗಳನ್ನು ತಿನ್ನುವವರಿಗೆ ಸುಸುದ್ದಿ.

*　　*　　*

ಯುದ್ಧ ಸಾಮಗ್ರಿಗಳು ಸಾಕಷ್ಟು ಇಲ್ಲದೆ ಹೋದಾಗ ಯುದ್ಧವನ್ನೇ ಆರಂಭಿಸುವುದಿಲ್ಲ. (ಜನರಲ್‌ರವರ ಭಾಷಣ)

—ಜನರಲ್‌ರವರು ನಮ್ಮ ಪೌರಸಭಾ ಮಿಾಟಿಂಗುಗಳನ್ನು ನೋಡಿಲ್ಲ ಅಂತ ಕಾಣುತ್ತೆ.

*　　*　　*

ಗೋವಾದಲ್ಲಿ ಈಗ ಮಿಲಿಟರಿ ತೆರಿಗೆ ಹಾಕಿದ್ದಾರಂತೆ.

—ಗೋವಾದಲ್ಲಿ ಈಗ ಜೀವನವೇ ಲಾಟರಿಯಾಗುತ್ತಿದೆ.

*　　*　　*

ಅಖಿಲ ಭಾರತ ಹಾಕಿ ಆಟಗಾರರು ತಮ್ಮ ಸಮವಸ್ತ್ರಕ್ಕನುಗುಣವಾಗಿ ಉಗುರುಗಳಿಗೆ ಬಣ್ಣ ಹಚ್ಚಿಕೊಳ್ಳಬೇಕೆಂದು ಸಲಹೆಬಂದಿದೆಯಂತೆ.

—ಹಲವು ಟೀಮುಗಳ ಆಟ ನೋಡಿದಮೇಲೆ ಈ ಸಲಹೆ ಬಂದಿತೇ ?

*　　*　　*

ಹಾಸನದಲ್ಲಿ ಎರಡು ಅಂಗುಲ ಮಳೆ ಬಿತ್ತುಕಣೋ ಎಂದಾಗ "ಆ್ಞ! ಎಲ್ಲಿ ಇಂಪ್ಲಿಮೆಂಟ್ ಫ್ಯಾಕ್ಟರಿಯೆಲ್ಲೀ?" ಎಂದು ಕಿವಿ ಆಲಿಸಿಕೊಂಡು ಕೇಳಿದನಂತೆ, ಕೆಕರ.

—o—